**ಅನುಬಂಧ - 4**

# ಸ್ಟಾಕ್ ಬ್ರೋಕರುಗಳು, ಸಬ್-ಬ್ರೋಕರುಗಳು ಮತ್ತು ಗ್ರಾಹಕರ ಹಕ್ಕುಗಳು ಮತ್ತು ಬಾಧ್ಯತೆಗಳು

***SEBI ಮತ್ತು ಸ್ಟಾಕ್ ಎಕ್ಸ್‌ಚೇಂಜುಗಳು ನಿರ್ಣಯಿಸಿದಂತೆ***

1. ಗ್ರಾಹಕನು ಎಕ್ಸ್‌ಚೇಂಜುಗಳು / ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (SEBI) ಮತ್ತು ಅದರ ಅಡಿಯಲ್ಲಿ ಕಾಲಕಾಲಕ್ಕೆ ನೀಡುವ ಸುತ್ತೋಲೆಗಳು / ನೋಟಿಸುಗಳು ರೂಪಿಸಿರುವ ನಿಯಮಗಳು/ಬೈಲಾಗಳು ಮತ್ತು ನಿಬಂಧನೆಗಳ ಪ್ರಕಾರ ವ್ಯವಹಾರಗಳಿಗೆ ಅಂಗೀಕರಿಸಲ್ಪಡುವ ಸೆಕ್ಯುರಿಟಿಗಳು/ ಕರಾರುಗಳು/ ಇತರ ಉಪಕರಣಗಳಲ್ಲಿ ಮಾತ್ರ ಹೂಡಿಕೆ/ ವ್ಯಾಪಾರ ಮಾಡಬೇಕು.
2. ಸ್ಟಾಕ್ ಬ್ರೋಕರ್, ಸಬ್ ಬ್ರೋಕರ್ ಮತ್ತು ಗ್ರಾಹಕರು ಕಾಲ ಕಾಲಕ್ಕೆ ಜಾರಿಯಲ್ಲಿರುವ ಎಕ್ಸ್‌ಚೇಂಜ್ ನಿಯಮಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಅದರ ಸುತ್ತೋಲೆಗಳು/ನೋಟಿಸುಗಳ ಅಡಿಯಲ್ಲಿ ನೀಡಲಾದ ಎಲ್ಲ ನಿಯಮಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು SEBI ನಿಯಮಗಳು ಮತ್ತು ನಿಬಂಧನೆಗಳು ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಸರ್ಕಾರದ ಅಧಿಕಾರಿಗಳ ಸಂಬಂಧಪಟ್ಟ ಅಧಿಸೂಚನೆಗಳಿಂದ ಬದ್ಧರಾಗುತ್ತಾರೆ.
3. ಸ್ಟಾಕ್ ಬ್ರೋಕರ್ ಮೂಲಕ ತಮ್ಮ ಆದೇಶಗಳನ್ನು ಜಾರಿಗೊಳಿಸಬಯಸುವ ಗ್ರಾಹಕರು ಸೆಕ್ಯುರಿಟೀಸ್ ಮತ್ತು/ಅಥವಾ ಡಿರೈವೇಟೀವ್ಸ್ ಕರಾರುಗಳನ್ನು ನಿಭಾಯಿಸುವಲ್ಲಿ ಸ್ಟಾಕ್ ಬ್ರೋಕರಿಗೆ ಇರುವ ಸಾಮರ್ಥ್ಯದ ಬಗ್ಗೆ ತಾವೇ ನಿರ್ಣಯ ಕೈಗೊಳ್ಳಬೇಕು. ಆದೇಶಗಳನ್ನು ಸ್ಟಾಕ್ ಬ್ರೋಕರ್ ಮೂಲಕ ಜಾರಿಗೊಳಿಸುವ ಮುನ್ನ ಇದನ್ನು ಕಾಲಕಾಲಕ್ಕೆ ಗ್ರಾಹಕರು ಮಾಡಬೇಕಾಗುತ್ತದೆ.
4. ಸ್ಟಾಕ್ ಬ್ರೋಕರ್ ತಾನು ಒದಗಿಸುವ ಸೇವೆಗಳಿಗೆ ಗ್ರಾಹಕನ ಹೂಡಿಕೆ ಉದ್ದೇಶಗಳ ಅನುಗುಣವಾಗಿ ಇವೆಯೇ ಎಂದು ಪರಿಶೀಲಿಸುತ್ತಿರಬೇಕು ಮತ್ತು ಗ್ರಾಹಕನ ಸಾಚಾತನ ಮತ್ತು ಹಣಕಾಸಿನ ಬದ್ಧತೆಗಳ ಬಗ್ಗೆ ನಿರಂತರವಾಗಿ ಗಮನ ಹರಿಸುತ್ತಿರಬೇಕು.
5. ಈ ವ್ಯವಹಾರದಲ್ಲಿ ಸ್ಟಾಕ್ ಬ್ರೋಕರ್ ತನ್ನ ಹೊಣೆಗಾರಿಕೆ ಎಷ್ಟೆಂಬುದನ್ನು ಗ್ರಾಹಕನಿಗೆ ಮನದಟ್ಟು ಮಾಡಿಕೊಡಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು-ಮಿತಿಗಳು,ಹೊಣೆಗಾರಿಕೆ ಮತ್ತು ಯಾವ ಸಾಮರ್ಥ್ಯದಲ್ಲಿ ತಾನು ಕಾರ್ಯ ನಡೆಸುತ್ತಿದ್ದೇನೆ ಇತ್ಯಾದಿಗಳು ಇದರಲ್ಲಿ ಸೇರುತ್ತವೆ.
6. ಗ್ರಾಹಕನ(ರ) ಜೊತೆ ನಡೆಸುವ ಎಲ್ಲ ವ್ಯವಹಾರಗಳಲ್ಲೂ ಸಬ್ -ಬ್ರೋಕರ್ ಬ್ರೋಕರಿಗೆ ಅಗತ್ಯವಾದ ನೆರವು ಮತ್ತು ಸಹಕಾರವನ್ನು ಒದಗಿಸಬೇಕು.

## ಗ್ರಾಹಕನ ಮಾಹಿತಿ

7. ಗ್ರಾಹಕನು 'ಅಕೌಂಟ್ ಓಪನಿಂಗ್ ಫಾರಂ'ನಲ್ಲಿ ಸ್ಟಾಕ್ ಬ್ರೋಕರಿಗೆ ಬೇಕಾದಂತಹ, ಸ್ಟಾಕ್ ಎಕ್ಸ್‌ಚೇಂಜುಗಳು/SEBI ಕಾಲ ಕಾಲಕ್ಕೆ ಕಡ್ಡಾಯ ಮಾಡುವ ಎಲ್ಲ ವಿವರಗಳನ್ನು ಪೂರ್ಣವಾಗಿ ಮತ್ತು ರುಜುವಾತು ಒದಗಿಸುವ ವಿವರಗಳನ್ನು ಒದಗಿಸಬೇಕು.
8. ಗ್ರಾಹಕನು ಖಾತೆ ತೆರೆಯುವ ಕಾಗದ ಪತ್ರಗಳಲ್ಲಿರುವ ಎಲ್ಲ ಕಡ್ಡಾಯ ನಿಬಂಧನೆಗಳ ಬಗ್ಗೆ ಪರಿಚಯ ಹೊಂದಿರಬೇಕು. ಗ್ರಾಹಕನು ಅಂಗೀಕರಿಸುವ ಕರಾರುಗಳು ಮತ್ತು ಷರತ್ತುಗಳ ಅನ್ವಯ ಸ್ಟಾಕ್ ಬ್ರೋಕರ್ ನಿಗದಿ ಪಡಿಸುವ ಯಾವುದೇ ಹೆಚ್ಚುವರಿ ಕಲಂಗಳು ಅಥವಾ ಕಾಗದ ಪತ್ರಗಳು ಕಡ್ಡಾಯವಲ್ಲ.
9. ಖಾತೆ ತೆರೆಯುವಾಗ ಅಥವಾ ನಂತರ 'ಅಕೌಂಟ್ ಓಪನಿಂಗ್ ಫಾರಂ'ನಲ್ಲಿ ಒದಗಿಸಿರುವ ಮಾಹಿತಿಯಲ್ಲಿ ಏನಾದರೂ ಬದಲಾವಣೆಗಳಾದರೆ ಗ್ರಾಹಕನು ತಕ್ಷಣವೇ ಸ್ಟಾಕ್ ಬ್ರೋಕರಿಗೆ ತಿಳಿಸಬೇಕು. ಇದರಲ್ಲಿ ಪಿಟಿಷನ್/ದಿವಾಳಿತನದ ಪಿಟಿಷನ್ ಅಥವಾ ಗ್ರಾಹಕನ ಸಾಮರ್ಥ್ಯದ ಮೇಲೆ ಪ್ರಮುಖ ಪ್ರಭಾವ ಬೀರುವ ಯಾವುದೇ ತಗಾದೆಯ ಬಗೆಗಿನ ಮಾಹಿತಿಯೂ ಸೇರುತ್ತದೆ. ಗ್ರಾಹಕನು ನಿಗದಿತ ಕಾಲಾವಧಿಯ ಆಧಾರದ ಮೇಲೆ ಸ್ಟಾಕ್ ಬ್ರೋಕರಿಗೆ ತನ್ನ ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ತಾಜಾ ಮಾಹಿತಿಯನ್ನು ನೀಡುತ್ತಿರಬೇಕು.
10. ಸ್ಟಾಮ್ ಬ್ರೋಕರ್ ಹಾಗೂ ಸಬ್ ಬ್ರೋಕರ್ ಖಾತೆ ತೆರೆಯುವ ಫಾರಂನಲ್ಲಿರುವಂತೆ ಗ್ರಾಹಕನಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ

ಮತ್ತು ಇನ್ಯಾವುದಾದರೂ ವಿವರಗಳನ್ನು ಗೌಪ್ಯವಾಗಿ ಇರಿಸಬೇಕು ಮತ್ತು ಅದನ್ನು ಅನ್ಯ ವ್ಯಕ್ತಿ/ಪ್ರಾಧಿಕಾರಕ್ಕೆ ಬಹಿರಂಗಪಡಿಸುವಂತಿಲ್ಲ, ಆದರೆ ಯಾವುದೇ ಕಾನೂನು/ನಿಯಂತ್ರಣ ಪ್ರಾಧಿಕಾರವು ಕೋರಿದರೆ ಅದಕ್ಕೆ ಬಹಿರಂಗಪಡಿಸಬೇಕಾಗುತ್ತದೆ. ಆದರೆ, ಸ್ಟಾಕ್ ಬ್ರೋಕರ್ ತನ್ನ ಗ್ರಾಹಕನ ಸ್ಪಷ್ಟವಾದ ಅನುಮತಿಯನ್ನು ಪಡೆದ ನಂತರ ಅನ್ಯ ವ್ಯಕ್ತಿ/ ಪ್ರಾಧಿಕಾರಕ್ಕೆ ಗ್ರಾಹಕನ ಬಗೆಗಿನ ಮಾಹಿತಿಯನ್ನು ಬಹಿರಂಗಪಡಿಸಬಹುದು.

**ಮಾರ್ಜಿನುಗಳು**

11. ಕಾಲಕಾಲಕ್ಕೆ ಗ್ರಾಹಕನು ವ್ಯಾಪಾರ ಮಾಡುವ ವಿಭಾಗ(ಗಳಿಗೆ)ಕ್ಕೆ SEBI ಸೂಚಿಸುವ ಅಥವಾ ಸ್ಟಾಕ್ ಬ್ರೋಕರ್ ಅಥವಾ ಎಕ್ಸ್‌ಚೇಂಜ್ ಅಗತ್ಯವೆಂದು ಪರಿಗಣಿಸುವ ಮತ್ತು ಅನ್ವಯವಾಗುವ ಆರಂಭಿಕ ಮಾರ್ಜಿನ್, ವಿದ್‌ಹೋಲ್ಡಿಂಗ್ ಮಾರ್ಜಿನ್ (ಮೂಲದ ಲ್ಲೇ ಮುರಿದುಕೊಳ್ಳುವ), ವಿಶೇಷ ಮಾರ್ಜಿನ್ ಅಥವಾ ಇತರ ಅಂತಹ ಮಾರ್ಜಿನುಗಳನ್ನು ಗ್ರಾಹಕನು ಪಾವತಿಸಬೇಕು. ಸ್ಟಾಕ್ ಬ್ರೋಕರ್ ತನ್ನದೇ ಸ್ವಂತ ವಿವೇಚನೆಯ ಮೇರೆಗೆ ಹೆಚ್ಚುವರಿ ಮಾರ್ಜಿನನ್ನು (ಎಕ್ಸ್‌ಚೇಂಜ್/ಕ್ಲಿಯರಿಂಗ್ ಕಾರ್ಪೊರೇಷನ್ ಅಥವಾ SEBI ಕೋರಿರದಿದ್ದರೂ) ಸಂಗ್ರಹಿಸಲು ಅನುಮತಿಯಿದೆ ಮತ್ತು ಗ್ರಾಹಕನು ಅಂತಹ ಮಾರ್ಜಿನುಗಳನ್ನು ನಿಗದಿತ ಸಮಯದ ಒಳಗೆ ಪಾವತಿಸಬೇಕು.
12. ಮಾರ್ಜಿನುಗಳನ್ನು ಪಾವತಿಸಿದ ಕ್ಷಣಕ್ಕೆ ಎಲ್ಲ ಬಾಕಿಗಳನ್ನು ಪಾವತಿಸಿದಂತೆ ಆಗುವುದಿಲ್ಲ ಎಂಬುದನ್ನು ಗ್ರಾಹಕನು ತಿಳಿದಿರಬೇಕು. ಮಾರ್ಜಿನುಗಳನ್ನು ಬಿಡದೆ ಪಾವತಿಸುತ್ತಿದ್ದರೂ ಗ್ರಾಹಕನು ತನ್ನ ವ್ಯಾಪಾರದ ಲೆಕ್ಕ ಚುಕ್ತಮಾಡುವಾಗ ಕರಾರಿನ ಪ್ರಕಾರ ನೀಡಬೇಕಾದ ಇತರ ಮೊತ್ತಗಳನ್ನು ಪಾವತಿಸಬೇಕಾಗುತ್ತದೆ (ಅಥವಾ ಸ್ವೀಕರಿಸಲು ಹಕ್ಕಿರುತ್ತದೆ).

**ವ್ಯವಹಾರಗಳು ಮತ್ತು ಲೆಕ್ಕ ಫೈಸಲುಗಳು**

13. ಸ್ಟಾಕ್ ಬ್ರೋಕರ್ ಮತ್ತು ಗ್ರಾಹಕರು ಪರಸ್ಪರ ಒಪ್ಪಿರುವಂತೆ ಲಿಖಿತ ಅಥವಾ ಇನ್ಯಾವುದೇ ರೀತಿಯಲ್ಲಿ ಗ್ರಾಹಕನು ಒಂದು ಸೆಕ್ಯುರಿಟಿ/ಡೆರಿವೇಟಿವುಗಳನ್ನು ಕೊಳ್ಳಲು/ಮಾರಲು ಆದೇಶ ನೀಡಬಹುದು. ಸ್ಟಾಕ್ ಬ್ರೋಕರ್, ಗ್ರಾಹಕನಿಗೆ ನೀಡಿರುವ ಯುನಿಕ್ ಕ್ಲೈಂಟ್ ಕೋಡ್‌ನಲ್ಲಿ ಮಾತ್ರವೇ ಗ್ರಾಹಕನ ವ್ಯಾಪಾರಗಳ ಆದೇಶಗಳನ್ನು ಕೊಡಬಹುದು ಮತ್ತು ಜಾರಿಗೊಳಿಸಬಹುದು.
14. ಸ್ಟಾಕ್ ಬ್ರೋಕರ್, ಟ್ರೇಡಿಂಗ್/ಸೆಟಲ್ಮೆಂಟ್ ಚಕ್ರಗಳನ್ನು, ಡೆಲಿವರಿ/ಪಾವತಿ ವೇಳಾಪಟ್ಟಿಗಳನ್ನು, ಕಾಲಕಾಲಕ್ಕೆ ಅವುಗಳಲ್ಲಿ ಆಗುವ ಬದಲಾವಣೆಗಳನ್ನು ಗ್ರಾಹಕನಿಗೆ ತಿಳಿಸುತ್ತಿರಬೇಕು. ಅದೇ ರೀತಿ, ತನ್ನ ಟ್ರೇಡ್‌ಗೆ ಸಂಬಂಧಪಟ್ಟ ವೇಳಾಪಟ್ಟಿಗಳ /ಕಾರ್ಯವಿಧಾನಗಳನ್ನು ಅನುಸರಿಸುವುದು ಗ್ರಾಹಕನ ಜವಾಬ್ದಾರಿಯಾಗಿರುತ್ತದೆ.
15. ಸ್ಟಾಕ್ ಬ್ರೋಕರ್, ಗ್ರಾಹಕನು ಜಮಾ ಮಾಡಿದ ಹಣ/ಸೆಕ್ಯುರಿಟಿಯನ್ನು ಒಂದು ಪ್ರತ್ಯೇಕ ಖಾತೆಯಲ್ಲಿ ಇಡಬೇಕು, ಅದು ಅವನ/ತನ್ನ ಸ್ವಂತದ ಖಾತೆ ಅಥವಾ ಇನ್ಯಾವುದೇ ಗ್ರಾಹಕನ ಖಾತೆಯಿಂದ ಪ್ರತ್ಯೇಕವಾಗಿರಬೇಕು ಮತ್ತು ಸ್ಟಾಕ್ ಬ್ರೋಕರ್ ಅದನ್ನು ತನಗಾಗಲಿ ಅಥವಾ ಇತರ ಯಾವುದೇ ಗ್ರಾಹಕನಿಗಾಗಲಿ ಅಥವಾ SEBI ನಿಯಮಾವಳಿಗಳು, ನಿಬಂಧನೆಗಳು, ಸುತ್ತೋಲೆಗಳು, ನೋಟಿಸುಗಳು, ಮಾರ್ಗದರ್ಶಕಗಳು ಮತ್ತು/ಅಥವಾ ಎಕ್ಸ್‌ಚೇಂಜಿನ ನಿಯಮಾವಳಿಗಳು, ನಿಬಂಧನೆಗಳು, ಬೈಲಾಗಳು, ಸುತ್ತೋಲೆಗಳು ಮತ್ತು ನೋಟಿಸುಗಳಲ್ಲಿ ತಿಳಿಸಿರುವ ಉದ್ದೇಶಗಳಲ್ಲದೇ ಇತರ ಉದ್ದೇಶಗಳಿಗೆ ಬಳಸಬಾರದು.
16. ಒಂದು ವೇಳೆ ಎಕ್ಸ್‌ಚೇಂಜ್ ತಾನಾಗಿಯೇ ಗ್ರಾಹಕನ ಪರವಾಗಿ ಮಾಡುವ ಟ್ರೇಡ್ ಕೂಡ ಸೇರಿದಂತೆ ಎಲ್ಲ ಟ್ರೇಡುಗಳನ್ನು ರದ್ದುಪಡಿಸಿದರೆ ಸ್ಟಾಕ್ ಬ್ರೋಕರ್ ಗ್ರಾಹಕನಿಗೆ ಸಂಬಂಧಿಸಿದ ಅಂತಹ ಒಪ್ಪಂದಗಳನ್ನು ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತಾರೆ.
17. ಎಕ್ಸ್‌ಚೇಂಜಿನಲ್ಲಿ ನಡೆಯುವ ವ್ಯವಹಾರಗಳು ಟ್ರೇಡ್ ನಡೆಯುವ ಎಕ್ಸ್‌ಚೇಂಜ್‌ನ ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಅವುಗಳ ಅಡಿಯಲ್ಲಿ ನೀಡಿರುವ ಸುತ್ತೋಲೆಗಳಿಗೆ / ನೋಟಿಸುಗಳಿಗೆ ಒಳಪಟ್ಟಿರುತ್ತವೆ, ಮತ್ತು ಅಂತಹ ಟ್ರೇಡಿನ ಎಲ್ಲ ಪಕ್ಷಗಳೂ ಎಕ್ಸ್‌ಚೇಂಜ್‌ನ ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಅವುಗಳ ಅಡಿಯಲ್ಲಿ ನೀಡಿರುವ ಸುತ್ತೋಲೆಗಳಲ್ಲಿ/ ನೋಟಿಸುಗಳಲ್ಲಿ ಹೇಳಿರುವುದನ್ನು ಜಾರಿಗೆ ತರಲು ಅಂತಹ ಎಕ್ಸ್‌ಚೇಂಜುಗಳ ಬೈಲಾಗಳು ಮತ್ತು ನಿಬಂಧನೆಗಳು ನಿರ್ದಿಷ್ಟವಾಗಿ ಹೇಳುವ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತಾರೆ.

## ಬ್ರೋಕರೇಜ್

18. ಕಾಲ ಕಾಲಕ್ಕೆ ಜಾರಿಯಲ್ಲಿರುವಂತೆ, ಗ್ರಾಹಕನ ಖಾತೆಗೆ ಅನ್ವಯವಾಗುವಂತೆ, ಸ್ಟಾಕ್ ಬ್ರೋಕರ್ ಗ್ರಾಹಕನಿಗೆ ನೀಡುವ ಸೇವೆಗಳಿಗೆ ಗ್ರಾಹಕನು ಬ್ರೋಕರೇಜ್ ಮತ್ತುಶಾಸನಬದ್ಧ ಸುಂಕಗಳನ್ನು ಪಾವತಿಸಬೇಕು. ಸ್ಟಾಕ್ ಬ್ರೋಕರ್, ಸಂಬಂಧಪಟ್ಟ ಸ್ಟಾಕ್ ಎಕ್ಸ್ ಚೇಂಜುಗಳು ಮತ್ತು/ ಅಥವಾ SEBI ನಿಯಮಾವಳಿಗಳು ಮತ್ತು ನಿಬಂಧನೆಗಳು ಅನುಮತಿಸಿರುವ ಗರಿಷ್ಠ ಬ್ರೋಕರೇಜ್‌ಗಿಂತ ಹೆಚ್ಚು ಬ್ರೋಕರೇಜನ್ನು ತೆಗೆದುಕೊಳ್ಳುವಂತಿಲ್ಲ.

## ಸಮಾಪನ ಮತ್ತು ಕ್ಲೋಸ್ ಔಟ್ ಸ್ಥಿತಿ

19. ಒಂದು ವೇಳೆ ಗ್ರಾಹಕನು ಮಾರ್ಜಿನ್, ಬಾಕಿ ಮೊತ್ತಗಳು ಅಥವಾ ಇನ್ಯಾವುದೇ ಮೊತ್ತಗಳನ್ನು ಪಾವತಿಸದಿದ್ದರೆ ಸ್ಟಾಕ್ ಬ್ರೋಕರ್ ತನ್ನ ಇತರ ಹಕ್ಕುಗಳನ್ನು ಕಳೆದುಕೊಳ್ಳದೆ (ಇದರಲ್ಲಿ ಮಧ್ಯಸ್ಥಿಕೆ ಒಪ್ಪಂದವೂ ಸೇರುತ್ತದೆ) ಗ್ರಾಹಕನ ಎಲ್ಲ ಅಥವಾ ಯಾವುದೇ ಸ್ಥಿತಿಗಳನ್ನು ಸಮಾಪನ / ಕ್ಲೋಸ್ ಔಟ್ ಮಾಡಿ ಬಂದ ಮೊತ್ತವನ್ನು ಗ್ರಾಹಕನ ಹೊಣೆಗಳು / ಬಾಧ್ಯತೆಗಳು, ಇತ್ಯಾದಿ ಏನಿವೆಯೋ ಅವುಗಳಿಗೆ ಹೊಂದಿಸಬಹುದು. ಅಂತಹ ಸಮಾಪನ / ಕ್ಲೋಸ್ ಔಟ್ ಸನ್ನಿವೇಶದಲ್ಲಿ ಉಂಟಾದ ಯಾವುದೇ ಮತ್ತು ಎಲ್ಲ ನಷ್ಟಗಳನ್ನು ಮತ್ತು ಹಣಕಾಸಿನ ಚಾರ್ಜ್‌ಗಳನ್ನು ಗ್ರಾಹಕನೇ ಭರಿಸಬೇಕಾಗುತ್ತದೆ .
20. ಒಂದು ವೇಳೆ ಗ್ರಾಹಕ ಸತ್ತರೆ ಅಥವಾ ಅವನು ಕೊಳ್ಳಲು ಅಥವಾ ಮಾರಲು ಆದೇಶಿಸಿರುವ ಸೆಕ್ಯುರಿಟಿಗಳನ್ನು ಡೆಲಿವರ್ ಮಾಡಲು ಅಥವಾ ವರ್ಗಾವಣೆ ಮಾಡಲು, ಹಣ ಸ್ವೀಕರಿಸಲು ಅಥವಾ ಪಾವತಿಸಲು ಅಸಮಥನಾದರೆ ಅಂತಹ ಸಂದರ್ಭಗಳಲ್ಲಿ ಸ್ಟಾಕ್ ಬ್ರೋಕರ್ ಗ್ರಾಹಕನ ವ್ಯವಹಾರವನ್ನು ಕ್ಲೋಸ್ ಔಟ್ ಮಾಡಿ ಏನಾದರೂ ನಷ್ಟ ಉಂಟಾದರೆ ಅದನ್ನು ಗ್ರಾಹಕನ ಸಂಪತ್ತಿಗೆ ಹೊಂದಿಸಬಹುದು . ಇದರಿಂದ ಬಂದ ಹೆಚ್ಚುವರಿ ಮೊತ್ತವನ್ನು ಗ್ರಾಹಕ ಅಥವಾ ಅವನ ನಾಮಿನಿಗಳು, ಉತ್ತರಾಧಿಕಾರಿಗಳು, ವಾರಸುದಾರರು ಮತ್ತು ಹಸ್ತಾಂತರ ಗ್ರಾಹಿಗಳು ಕ್ಲೇಮ್ ಮಾಡಬಹುದು. ಗ್ರಾಹಕನು ಗಮನಿಸಬೇಕು: ನಾಮಿನಿಯ ಪರವಾಗಿ ಮಾಡಿದ ನಿಧಿ /ಸೆಕ್ಯುರಿಟೀಸ್ ವರ್ಗಾವಣೆ ಕಾನೂನು ಸಮ್ಮತ ವಾರಸುದಾರನ ವಿರುದ್ಧ ಸಿಂಧುವಾದ ನಿರ್ವಹಣೆಯಾಗಿರುತ್ತದೆ.
21. ಸ್ಟಾಕ್ ಬ್ರೋಕರ್, ಗ್ರಾಹಕನು ಪಾವತಿ /ಡೆಲಿವರಿಯಲ್ಲಿ ತಪ್ಪಿದ್ದಲ್ಲಿ ಅಂತಹ ಮಾಹಿತಿಯನ್ನು ಮತ್ತು ಸಂಬಂಧಪಟ್ಟ ಸಂಗತಿಗಳನ್ನು ಸಂಬಂಧಪಟ್ಟ ಇನ್ಯಾವುದೇ ಕೃತಕ ಕಾನೂನು ಸಂಸ್ಥೆಯಾಗಿದ್ದರೆ ಸ್ಟಾಕ್ ಬ್ರೋಕರ್, ನಿರ್ದೇಶಕ(ರ)/ಪ್ರವರ್ತಕ (ರ)/ಪಾಲುದಾರ(ರ)/ಪ್ರೊಪ್ರೈಟರ್ ಹೆಸರನ್ನೂ ಸ್ಟಾಕ್ ಎಕ್ಸ್‌ಚೇಂಜಿಗೆ ತಿಳಿಸಬೇಕು.

## ವ್ಯಾಜ್ಯ ಪರಿಹಾರ

22. ಸ್ಟಾಕ್ ಬ್ರೋಕರ್ ಗ್ರಾಹಕನಿಗೆ ಸಂಬಂಧಪಟ್ಟ ಎಕ್ಸ್‌ಚೇಂಜುಗಳು ಮತ್ತು SEBIಗಳ ಸಂಪರ್ಕ ವಿವರಗಳನ್ನು ಒದಗಿಸಬೇಕು.
23. ತನ್ನ ಮೂಲಕ ನಡೆದ ಎಲ್ಲ ವ್ಯವಹಾರಗಳಿಗೆ ಸಂಬಂಧಿಸಿದ ದೂರುಗಳನ್ನು ಪರಿಹರಿಸಲು ಮತ್ತು ಷೇರುಗಳ ಕೆಟ್ಟ ಡೆಲಿವರಿಯ ಬಗೆಗಿನ ಆಕ್ಷೇಪಣೆಗಳನ್ನು ನಿವಾರಿಸಲು, ಕೆಟ್ಟ ಡೆಲಿವರಿಯನ್ನು ಸರಿಪಡಿಸಲು, ಇತ್ಯಾದಿಗಳಲ್ಲಿ ಸ್ಟಾಕ್ ಬ್ರೋಕರ್ ಸಹಕರಿಸಬೇಕು.
24. ಗ್ರಾಹಕ ಮತ್ತು ಸ್ಟಾಕ್ ಬ್ರೋಕರ್ ಡಿಪಾಜಿಟ್, ಮಾರ್ಜಿನ್ ಹಣ, ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದೇ ಕ್ಲೇಮ್ ಮತ್ತು/ಅಥವಾ ವ್ಯಾಜ್ಯಗಳನ್ನು ಎಲ್ಲಿ ಟ್ರೇಡ್ ನಡೆದಿರುತ್ತದೋ ಅಲ್ಲಿನ ಎಕ್ಸ್‌ಚೇಂಜಿನ ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಅವುಗಳ ಅಡಿಯಲ್ಲಿ ಕಾಲ ಕಾಲಕ್ಕೆ ಜಾರಿಯಾಗುವ ಸುತ್ತೋಲೆಗಳು/ ನೋಟಿಸುಗಳ ಪ್ರಕಾರ ಮಧ್ಯಸ್ಥಿಕೆಗೆ ಒಪ್ಪಿಸಬೇಕು.
25. ತನ್ನ ಮತ್ತು ಗ್ರಾಹಕನ ನಡುವೆ ನಡೆದ ವ್ಯವಹಾರಗಳಿಂದ ಬಂದ ಯಾವುದೇ ಮಧ್ಯಸ್ಥಿಕೆಯ ಕಾರ್ಯವಿಧಾನಗಳು ತ್ವರಿತವಾಗಿ ಮುಕ್ತಾಯವಾಗುವಂತೆ ಸ್ಟಾಕ್ ಬ್ರೋಕರ್ ನೋಡಿಕೊಳ್ಳಬೇಕು. ಅಂತಹ ಕಾರ್ಯವಿಧಾನಗಳು ಮಾಡಿದ ತೀರ್ಪನ್ನು ಅನುಷ್ಠಾನಕ್ಕೆ ತರುವುದು ಸ್ಟಾಕ್ ಬ್ರೋಕರನ ಬಾಧ್ಯತೆ.
26. ವ್ಯಾಜ್ಯ ಪರಿಹಾರಕ್ಕಾಗಿ ಗ್ರಾಹಕನ / ಸ್ಟಾಕ್ ಬ್ರೋಕರನ ಅಧಿಕೃತ ಪ್ರತಿನಿಧಿ ನೀಡಿದ ಸೂಚನೆಗಳು ಅಂತಹ ಪ್ರತಿನಿಧಿಗೆ ಅಧಿಕಾರ ನೀಡುವ ಪತ್ರದಲ್ಲಿರುವ ಪ್ರಕಾರ ಗ್ರಾಹಕ/ಸ್ಟಾಕ್ ಬ್ರೋಕರ್‌ನನ್ನು ಬಂಧಿಸುತ್ತವೆ.

**ಸಂಬಂಧವನ್ನು ಕೊನೆಗೊಳಿಸುವುದು**

27. ಸ್ಟಾಕ್ ಬ್ರೋಕರ್‌ನ ಲೋಪ, ಸಾವು, ರಾಜೀನಾಮೆ ಅಥವಾ ಉಚ್ಚಾಟನೆ ಅಥವಾ ಬೋರ್ಡಿನಿಂದ ಸರ್ಟಿಫಿಕೇಟಿನ ರದ್ದತಿ ಸೇರಿದಂತೆ ಯಾವುದೇ ಕಾರಣಗಳಿಗೆ ಸ್ಟಾಕ್ ಬ್ರೋಕರ್ ಸ್ಟಾಕ್ ಎಕ್ಸ್‌ಚೇಂಜಿನ ಸದಸ್ಯನಾಗಿರುವುದು ಕೊನೆಯಾದರೆ ಸ್ಟಾಕ್ ಬ್ರೋಕರ್ ಮತ್ತು ಗ್ರಾಹಕನ ನಡುವಿನ ಈ ಸಂಬಂಧವನ್ನು ಅಂತ್ಯಗೊಳ್ಳುತ್ತದೆ.
28. ಕನಿಷ್ಠ 1 ತಿಂಗಳ ನೋಟಿಸನ್ನು ನೀಡಿ ಸ್ಟಾಕ್ ಬ್ರೋಕರ್, ಸಬ್ ಬ್ರೋಕರ್ ಮತ್ತು ಗ್ರಾಹಕ ತಮ್ಮ ನಡುವಿನ ಸಂಬಂಧವನ್ನು ಇತರ ಪಕ್ಷಗಳಿಗೆ ಯಾವುದೇ ಕಾರಣಗಳನ್ನು ನೀಡದೇ ಅಂತ್ಯಗೊಳಿಸಬಹುದು. ಆದರೆ ಈ ಸಂಬಂಧವನ್ನು ಅಂತ್ಯಗೊಳಿಸುವ ಮುನ್ನ ಮಾಡಿದ ವ್ಯವಹಾರಗಳಿಂದ ಬರುವ ಎಲ್ಲ ಹಕ್ಕುಗಳು, ಬಾಧ್ಯತೆಗಳು ಮತ್ತು ಹೊಣೆಗಳು ಉಳಿದುಕೊಳ್ಳುತ್ತವೆ ಮತ್ತು ಆಯಾ ಪಕ್ಷಗಳನ್ನು ಅಥವಾ ಅವರ ವಾರಸುದಾರರು / ನಿರ್ವಾಹಕರು / ಆಡಳಿತಗಾರರು /ಕಾನೂನು ಸಮ್ಮತ ಪ್ರತಿನಿಧಿಗಳು ಅಥವಾ ಉತ್ತರಾಧಿಕಾರಿಗಳನ್ನು ಬಂಧಿಸುತ್ತವೆ.
29. ಒಂದ ವೇಳೆ ಸಬ್ ಬ್ರೋಕರ್ ಸತ್ತರೆ / ದಿವಾಳಿಯಾದರೆ ಅಥವಾ ಬೋರ್ಡಿನ ಜೊತೆಗಿನ ಅವನ / ಅದರ ರಿಜಿಸ್ಟ್ರೇಷನ್ ರದ್ದಾದರೆ ಅಥವಾ ಸ್ಟಾಕ್ ಎಕ್ಸ್‌ಚೇಂಜ್ ಸಬ್-ಬ್ರೋಕರ್‌ನ ಮಾನ್ಯತೆಯನ್ನು ಹಿಂದಕ್ಕೆ ಪಡೆದರೆ ಮತ್ತು/ ಅಥವಾ ಯಾವುದೇ ಕಾರಣದಿಂದಾಗಿ ಸ್ಟಾಕ್ ಬ್ರೋಕರ್ ಸಬ್ ಬ್ರೋಕರ್ ಜೊತೆಗಿನ ಒಪ್ಪಂದವನ್ನು ಕೊನೆಗೊಳಿಸಿದರೆ, ಅಂತಹ ಅಂತ್ಯವನ್ನು ಗ್ರಾಹಕನಿಗೆ ತಿಳಿಸಬೇಕು ಮತ್ತು ಗ್ರಾಹಕನನ್ನು ನೇರ ಸ್ಟಾಕ್ ಬ್ರೋಕರ್‌ನ ಗ್ರಾಹಕನೆಂದು ಪರಿಗಣಿಸಲಾಗುತ್ತದೆ ಮತ್ತು ಗ್ರಾಹಕನು ಸ್ಟಾಕ್ ಬ್ರೋಕರಿಗೆ ತಮ್ಮಿಬ್ಬರ ಸಂಬಂಧವನ್ನು ಕೊನೆಗೊಳಿಸುವ ಉದ್ದೇಶವನ್ನು ಕನಿಷ್ಠ 1 ತಿಂಗಳ ಲಿಖಿತ ಪೂರ್ವಭಾವಿ ನೋಟಿಸಿನ ಮೂಲಕ ತಿಳಿಸಿರದಿದ್ದರೆ ಸ್ಟಾಕ್ ಬ್ರೋಕರ್, ಸಬ್-ಬ್ರೋಕರ್ ಮತ್ತು ಗ್ರಾಹಕನನ್ನು ಪಾಲಿಸುವ 'ಹಕ್ಕುಗಳು ಮತ್ತು ಬಾಧ್ಯತೆಗಳ' ಎಲ್ಲ ಕಲಮುಗಳೂ ಮುಂದುವರಿಯುತ್ತವೆ.

**ಹೆಚ್ಚುವರಿ ಹಕ್ಕುಗಳು ಮತ್ತು ಬಾಧ್ಯತೆಗಳು**

30. ಸ್ಟಾಕ್ ಬ್ರೋಕರ್ ತನ್ನ ಮೂಲಕ ಗ್ರಾಹಕನು ಮಾಡಿದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಡಿವಿಡೆಂಡುಗಳ, ರೈಟ್ಸ್ ಅಥವಾ ಬೋನಸ್ ಷೇರುಗಳು, ಇತ್ಯಾದಿಗಳಿಗೆ ಗ್ರಾಹಕನಿಗೆ ಇರುವ ಹಕ್ಕುಗಳನ್ನು ಯುಕ್ತವಾಗಿ ರಕ್ಷಿಸಬೇಕು. ಸೆಕ್ಯುರಿಟಿಗಳಲ್ಲಿ ಯಾವ ಗ್ರಾಹಕನಿಗಾಗಿ ವ್ಯವಹಾರಗಳನ್ನು ಮಾಡಿದೆಯೋ ಆ ಗ್ರಾಹಕನ ಹಿತಾಸಕ್ತಿಗಳಿಗೆ ಧಕ್ಕೆಯಾಗಬಹುದಾದ ಯಾವುದನ್ನೂ ಮಾಡಬಾರದು.
31. ಎಲ್ಲಿ ಟ್ರೇಡ್ ನಡೆದಿರುತ್ತದೋ ಆ SEBI ಮತ್ತು ಸಂಬಂಧಪಟ್ಟ ಎಕ್ಸ್‌ಚೇಂಜುಗಳು ನೀಡಿರುವ ನಿಯಮಾವಳಿಗಳು, ನಿಬಂಧನೆಗಳು, ಬೈಲಾಗಳು, ವಿವರಗಳು, ಗ್ರಾಹಕನ ಕೋಡ್, ಬ್ರೋಕರೇಜ್, ವಿಧಿಸಿದ ಎಲ್ಲ ಸುಂಕಗಳು, ಇತ್ಯಾದಿಗಳನ್ನು ಒಳಗೊಂಡಂತೆ ಎಲ್ಲ ವ್ಯವಹಾರಗಳ ದಾಖಲೆಗಳನ್ನು ಎಕ್ಸ್‌ಚೇಂಜ್ ತಿಳಿಸಿರುವ ರೀತಿಯಲ್ಲೇ ಭರ್ತಿ ಮಾಡಿ ನೀಡಬೇಕು. ಸ್ಟಾಕ್ ಬ್ರೋಕರ್ ಈ ಕಾಂಟ್ರ್ಯಾಕ್ಟ್ ನೋಟುಗಳನ್ನು ಟ್ರೇಡ್ ನಡೆದ ಒಂದು ಕೆಲಸದ ದಿನದ ಒಳಗಾಗಿ ಹಾರ್ಡ್ ಕಾಪಿಯಲ್ಲಿ ಮತ್ತು/ಅಥವಾ ಡಿಜಿಟಲ್ ಸಹಿ ಬಳಸಿ ಇಲೆಕ್ಟ್ರಾನಿಕ್ ನಮೂನೆಯಲ್ಲಿ ಕಳುಹಿಸಬೇಕು.
32. ನಡೆಸಿದ ಟ್ರೇಡ್‌ಗಳಿಗೆ ಸ್ಟಾಕ್ ಬ್ರೋಕರ್ ತನ್ನ ಜೊತೆಗಾರರಿಗೆ ಒಂದು ಕಾಂಟ್ರ್ಯಾಕ್ಟ್ ನೋಟ್ ಅನ್ನು ಎಕ್ಸ್ ಚೇಂಜ್ ಕಾಲ ಕಾಲಕ್ಕೆ ನಿಗದಿ ಪಡಿಸುವ ನಮೂನೆಯಲ್ಲಿ ನೀಡಬೇಕು. ಇದರಲ್ಲಿ ಆದೇಶದ ಸಂಖ್ಯೆ, ಟ್ರೇಡ್ ನಂಬರ್, ಟ್ರೇಡ್ ಸಮಯ, ಟ್ರೇಡ್ ಬೆಲೆ, ಟ್ರೇಡ್ ಪ್ರಮಾಣ, ಡೆರಿವೇಟೀವ್ಸ್ ಒಪ್ಪಂದದ ವಿವರಗಳು, ಗ್ರಾಹಕನ ಕೋಡ್, ಬ್ರೋಕರೇಜ್, ವಿಧಿಸಿದ ಎಲ್ಲ ಸುಂಕಗಳು, ಇತ್ಯಾದಿಗಳನ್ನು ಒಳಗೊಂಡಂತೆ ಎಲ್ಲ ವ್ಯವಹಾರಗಳ ದಾಖಲೆಗಳನ್ನು ಎಕ್ಸ್ ಚೇಂಜ್ ತಿಳಿಸಿರುವ ರೀತಿಯಲ್ಲೇ ಭರ್ತಿ ಮಾಡಿ ನೀಡಬೇಕು. ಸ್ಟಾಕ್ ಬ್ರೋಕರ್ ಈ ಕಾಂಟ್ರ್ಯಾಕ್ಟ್ ನೋಟುಗಳನ್ನು ಟ್ರೇಡ್ ನಡೆದ ಒಂದು ಕೆಲಸದ ದಿನದ ಒಳಗಾಗಿ ಹಾರ್ಡ್ ಕಾಪಿಯಲ್ಲಿ ಮತ್ತು/ಅಥವಾ ಡಿಜಿಟಲ್ ಸಹಿ ಬಳಸಿ ಇಲೆಕ್ಟ್ರಾನಿಕ್ ನಮೂನೆಯಲ್ಲಿ ಕಳುಹಿಸಬೇಕು.
33. ಸ್ಟಾಕ್ ಬ್ರೋಕರ್, ಗ್ರಾಹಕನು ಅನ್ಯಥಾ ಹೇಳಿರದಿದ್ದರೆ ಎಲ್ಲಿ ಟ್ರೇಡ್ ನಡೆದಿರುತ್ತದೋ ಆ ಸಂಬಂಧಪಟ್ಟ ಎಕ್ಸ್‌ಚೇಂಜ್‌ನಿಂದ 'ಪೇ ಔಟ್' ಬಂದ 1 ಕೆಲಸದ ದಿನದ ಒಳಗಾಗಿ ಗ್ರಾಹಕನಿಗೆ ಸಂದರ್ಭಾನುಸಾರ ಹಣವನ್ನು 'ಪೇ ಔಟ್' ಮಾಡಬೇಕು ಅಥವಾ

ಸೆಕ್ಯುರಿಟೀಸ್ ಡೆಲಿವರಿ ಮಾಡಬೇಕು ಮತ್ತು ಇದು, ಸಂಬಂಧಪಟ್ಟ ಎಕ್ಸ್‌ಚೇಂಜ್ ಕಾಲಕಾಲಕ್ಕೆ ನಿಗದಿಪಡಿಸುವ ಕರಾರುಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

34. ಸ್ಟಾಕ್ ಬ್ರೋಕರ್ ಪ್ರತಿಯೊಬ್ಬ ಗ್ರಾಹಕನಿಗೂ ಒಂದು ಸಂಪೂರ್ಣವಾದ 'ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್' ಕಳುಹಿಸಬೇಕು. ಇದರ ನಮೂನೆ, ಕಾಲ ಮತ್ತು ಸಮಯಗಳನ್ನು ಟ್ರೇಡ್ ನಡೆದ ಸಂಬಂಧಪಟ್ಟ ಎಕ್ಸ್‌ಚೇಂಜ್ ಕಾಲಕಾಲಕ್ಕೆ ನಿಗದಿಪಡಿಸುತ್ತದೆ. ಈ ಹೇಳಿಕೆಯಲ್ಲಿ, ಗ್ರಾಹಕನು ತಪ್ಪುಗಳೇನಾದರೂ ಇದ್ದರೆ ಟ್ರೇಡ್ ನಡೆದ ಸಂಬಂಧಪಟ್ಟ ಎಕ್ಸ್‌ಚೇಂಜ್ ಕಾಲಕಾಲಕ್ಕೆ ನಿಗದಿಪಡಿಸುವ ಸಮಯದ ಒಳಗೆ ಸ್ಟಾಕ್ ಬ್ರೋಕರಿಗೆ ತಿಳಿಸಬೇಕು ಎಂದೂ ಹೇಳಿಕೆ ನೀಡಬೇಕು.

35. ಸ್ಟಾಕ್ ಬ್ರೋಕರ್, ಗ್ರಾಹಕರಿಗೆ 'ಡೈಲಿ ಮಾರ್ಜಿನ್' ಹೇಳಿಕೆಗಳನ್ನು ಕಳುಹಿಸಬೇಕು. ಬೇರೆ ವಿವರಗಳ ಜೊತೆಯಲ್ಲಿ ಈ ಹೇಳಿಕೆಯಲ್ಲಿ ಜಮಾ ಮಾಡಿದ , ಬಳಸಿಕೊಂಡ ಮೇಲಾಧಾರಗಳ ವಿವರಗಳು ಮತ್ತು ಸ್ಥಿತಿಗತಿ (ಲಭ್ಯವಿರುವ ಶಿಲ್ಕು/ಗ್ರಾಹಕನಿಂದ ಬರಬೇಕಾದ ಬಾಕಿ) ಜೊತೆಗೆ ನಗದು, ನಿಶ್ಚಿತ ಠೇವಣಿ ರಸೀತಿಗಳು (FDR), ಬ್ಯಾಂಕ್ ಗ್ಯಾರಂಟಿ ಮತ್ತು ಸೆಕ್ಯುರಿಟೀಸ್ ಎಂದ ವಿಭಾಗಿಸಿ ವಿವರಗಳನ್ನು ನೀಡಬೇಕು.

36. ಗ್ರಾಹಕನು, ಸ್ಟಾಕ್ ಬ್ರೋಕರ್ ಜೊತೆಗೆ ಸಂಬಂಧ ಬೆಳೆಸಲು ತಾನು ಅಗತ್ಯವಾದ ಕಾನೂನು ಸಾಮರ್ಥ್ಯವನ್ನು, ಅಧಿಕಾರವನ್ನು ಹೊಂದಿರುವುದಾಗಿ ಮತ್ತು ಅದರ ಅಡಿಯಲ್ಲಿ ಬರುವ ಹೊಣೆ ಮತ್ತು ಬಾಧ್ಯತೆಗಳನ್ನು ನೆರವೇರಿಸುವ ಸಾಮರ್ಥ್ಯವನ್ನು ಹೊಂದಿರುವುದಾಗಿ ಖಾತ್ರಿಪಡಿಸಬೇಕು. ಈ ವ್ಯವಹಾರಗಳನ್ನು ಪ್ರಾರಂಭಿಸುವ ಮುನ್ನ ಎಲ್ಲ ವ್ಯವಹಾರಗಳನ್ನು ಪೂರೈಸಲು ಅಗತ್ಯವಾದ ಎಲ್ಲ ಕಾರ್ಯಗಳನ್ನು ಮಾಡಿ ಮುಗಿಸಲಾಗಿದೆ ಎಂದು ಗ್ರಾಹಕನು ಖಾತ್ರಿಪಡಿಸಬೇಕು.

## ಇಲೆಕ್ಟ್ರಾನಿಕ್ ಕಾಂಟ್ರ್ಯಾಕ್ಟ್ ನೋಟ್ಸ್

37. ಒಂದು ವೇಳೆ ಗ್ರಾಹಕನು ಕಾಂಟ್ರ್ಯಾಕ್ಟ್ ನೋಟನ್ನು ಇಲೆಕ್ಟ್ರಾನಿಕ್ ಫಾರಂನಲ್ಲಿ ಸ್ವೀಕರಿಸುವ ಆಯ್ಕೆ ಮಾಡಿದ್ದರೆ, ಅವನು ಸ್ಟಾಕ್ ಬ್ರೋಕರಿಗೆ ಸರಿಯಾದ ಇ-ಮೇಲ್ ಐಡಿಯನ್ನು ಹಾರ್ಡ್ ಕಾಪಿಯಲ್ಲೇ ನೀಡಬೇಕು. ಗ್ರಾಹಕನು ಇಂಟರ್‌ನೆಟ್ ಟ್ರೇಡಿಂಗ್ ಆಯ್ಕೆಮಾಡಿದ್ದರೆ ಇಮೇಲ್ ಐಡಿ ಬದಲಾವಣೆಯನ್ನು ಗ್ರಾಹಕನ ನಿರ್ದಿಷ್ಟ 'ಯೂಸರ್ ಐಡಿ' ಮತ್ತು ಪಾಸ್‌ವರ್ಡ್‌ಬಳಸಿ ಸುಭದ್ರ ವ್ಯವಸ್ಥೆಯಲ್ಲಿ ಕೋರಬೇಕಾಗುತ್ತದೆ .

38. ಇಮೇಲ್ ಮೂಲಕ ಕಳುಹಿಸಿದ ಎಲ್ಲ ECNಗಳಿಗೆ ಡಿಜಿಟಲ್ ಸಹಿ, ಎನ್‌ಕ್ರಿಪ್ಟೆಡ್ ಇದ್ದು ಅದನ್ನು ಯಾರೂ ಅಕ್ರಮವಾಗಿ ತಿದ್ದಲು ಆಗಬಾರದು ಮತ್ತು ಐಟಿ ಕಾಯಿದೆ, 2000, ಉಪಬಂಧಗಳ ಅನುಸಾರ ಇರಬೇಕು. ಅಕಸ್ಮಾತ್ ಸ್ಟಾಕ್ ಬ್ರೋಕರ್ ಗ್ರಾಹಕನ ಇಮೇಲ್ ಐಡಿಗೆ ಕಳುಹಿಸಿದ ECN ಮೇಲ್ ಬೌನ್ಸ್ ಆದರೆ ಅದನ್ನು ಡೆಲಿವರಿ ಆಗಿದೆಯೆಂದು ಪರಿಗಣಿಸಲಾಗುವುದು.

39. ಸ್ಟಾಕ್ ಬ್ರೋಕರ್‌ನಿಂದ ಬೌನ್ಸ್ ಆದ ಮೇಲ್ ಅನ್ನು ಪಡೆಯದಿರುವುದು ಗ್ರಾಹಕರ ಇಮೇಲ್ ಐಡಿಯಲ್ಲಿ ಕಾಂಟ್ರಾಕ್ಟ್ ನೋಟ್‌ನ ವಿತರಣೆಯಾಗಿರುವುದಕ್ಕೆ ಸಮನಾಗಿರುತ್ತದೆ ಎನ್ನುವುದನ್ನು ಗ್ರಾಹಕರು ಗಮನಿಸಬೇಕು.

40. ಸ್ಟಾಕ್ ಬ್ರೋಕರ್ ಕಳುಹಿಸಿದ ಇಮೇಲ್‌ನ ECN ಮತ್ತು ಸ್ವೀಕೃತ ಪಾವತಿ ಯನ್ನು ಐಟಿ ಕಾಯಿದೆ, 2000 ಉಪಬಂಧಗಳ ಪ್ರಕಾರ ಎಕ್ಸ್‌ಚೇಂಜ್ ನಿಗದಿ ಪಡಿಸುವಂತೆ ಮತ್ತು SEBI/ಸ್ಟಾಕ್ ಎಕ್ಸ್‌ಚೇಂಜುಗಳು ಕಾಲಕಾಲಕ್ಕೆ ನೀಡುವ ಚಾಲ್ತಿಯಲ್ಲಿರುವ ನಿಯಮಾವಳಿಗಳು/ನಿಬಂಧನೆಗಳು/ ಸುತ್ತೋಲೆಗಳು/ಮಾರ್ಗದರ್ಶಕಗಳ ಒಂದು ಸಾಫ್ಟ್ ಹಾಗೂ ಅಕ್ರಮವಾಗಿ ತಿದ್ದಲು ಸಾಧ್ಯವಿಲ್ಲದ ನಮೂನೆಯಲ್ಲಿ ಉಳಿಸಿಕೊಂಡಿರಬೇಕು. ಡೆಲಿವರಿ ರುಜುವಾತಾಗಿ ಸಿಸ್ಟಂ ಉತ್ಪತ್ತಿ ಮಾಡುವ ಲಾಗ್ ರಿಪೋರ್ಟ್ ಅನ್ನು ಸ್ಟಾಕ್ ಬ್ರೋಕರ್ SEBI/ಸ್ಟಾಕ್ ಎಕ್ಸ್‌ಚೇಂಜುಗಳು ಕಾಲಕಾಲಕ್ಕೆ ನಿಗದಿಪಡಿಸುವ ಅವಧಿಗೆ ಕಾಪಾಡಿಕೊಳ್ಳಬೇಕು. ಗ್ರಾಹಕನಿಗೆ ಡೆಲಿವರಿ ಆಗದಿದ್ದರೂ/ ಇಮೇಲುಗಳು ತಿರಸ್ಕೃತ ಅಥವಾ ಬೌನ್ಸ್ ಆಗಿದ್ದರೂ ಲಾಗ್ ರಿಪೋರ್ಟಿನಲ್ಲಿ ಕಾಂಟ್ರ್ಯಾಕ್ಟ್ ನೋಟುಗಳ ವಿವರಗಳು ದೊರೆಯುತ್ತವೆ.

41. ಕಾಂಟ್ರ್ಯಾಕ್ಟ್ ನೋಟುಗಳನ್ನು ಇಲೆಕ್ಟ್ರಾನಿಕ್ ಮಾದರಿಯಲ್ಲಿ ಪಡೆಯುವ ಆಯ್ಕೆ ಮಾಡದಿದ್ದ ಗ್ರಾಹಕರಿಗೆ ಸ್ಟಾಕ್ ಬ್ರೋಕರ್ ಭೌತಿಕ ರೂಪದಲ್ಲಿ ಕಳುಹಿಸಬೇಕು. ಎಲ್ಲೆಲ್ಲಿ ECNಗಳನ್ನು ಗ್ರಾಹಕನಿಗೆ ಡೆಲಿವರಿ ಮಾಡಿಲ್ಲ/ಇಮೇಲುಗಳು ತಿರಸ್ಕೃತ ಅಥವಾ ಬೌನ್ಸ್ ಆಗಿವೆಯೋ ಅಲ್ಲೆಲ್ಲ ಸ್ಟಾಕ್ ಬ್ರೋಕರ್ SEBI/ಸ್ಟಾಕ್ ಎಕ್ಸ್‌ಚೇಂಜುಗಳು ಕಾಲಕಾಲಕ್ಕೆ ನೀಡುವ ಚಾಲ್ತಿಯಲ್ಲಿರುವ ನಿಯಮಾವಳಿಗಳು

ನಿಗದಿಪಡಿಸುವ ಸಮಯದ ಒಳಗೆ ಭೌತಿಕ ರೂಪದಲ್ಲಿ ಕಾಂಟ್ರ್ಯಾಕ್ಟ್ ನೋಟುಗಳನ್ನು ಕಳುಹಿಸಬೇಕು ಮತ್ತು ಅವುಗಳ ಡೆಲಿವರಿ ಬಗ್ಗೆ ರುಜುವಾತನ್ನು ಇರಿಸಿಕೊಳ್ಳಬೇಕು.

42. ಗ್ರಾಹಕನಿಗೆ ECNಗಳನ್ನು ಕಳುಹಿಸುವುದು ರ ಜೊತೆಗೆ ಸ್ಟಾಕ್ ಬ್ರೋಕರ್ ECNಗಳನ್ನು ತನ್ನ ನಿಗದಿತ ವೆಬ್-ಸೈಟಿನಲ್ಲಿ ಸುಭದ್ರವಾದ ರೀತಿಯಲ್ಲಿ ಪ್ರಕಟಿಸಬೇಕು. ಈ ಉದ್ದೇಶಕ್ಕಾಗಿ ಅವನು ಗ್ರಾಹಕನಿಗೆ ಒಂದ ವಿಶಿಷ್ಟ ಯೂಸರ್ ಹೆಸರು ಮತ್ತು ಪಾಸ್‌ವರ್ಡನ್ನು ನೀಡಬೇಕು ಜೊತೆಗೆ ಕಾಂಟ್ರ್ಯಾಕ್ಟ್ ನೋಟನ್ನು ಇಲೆಕ್ಟ್ರಾನಿಕ್ ರೂಪದಲ್ಲಿ ಮತ್ತು/ಅಥವಾ ಪ್ರಿಂಟ್ ತೆಗೆದುಕೊಂಡು ಭೌತಿಕ ರೂಪದಲ್ಲಿ ಕಾಪಾಡಿಟ್ಟಿಕೊಳ್ಳುವ ಆಯ್ಕೆಯನ್ನು ಗ್ರಾಹಕನಿಗೆ ಕೊಡಬೇಕು.

## ಕಾನೂನು ಮತ್ತು ವ್ಯಾಪ್ತಿ

43. ಈ ಕಾಗದಪತ್ರದಲ್ಲಿ ಹೇಳಿರುವ ನಿರ್ದಿಷ್ಟ ಹಕ್ಕುಗಳ ಜೊತೆಯಲ್ಲಿ ಸ್ಟಾಕ್ ಬ್ರೋಕರ್, ಸಬ್ ಬ್ರೋಕರ್ ಮತ್ತು ಗ್ರಾಹಕ, ಯಾವ ಎಕ್ಸ್ ಚೇಂಜಿನಲ್ಲಿ ಟ್ರೇಡ್ ಮಾಡಲು ಗ್ರಾಹಕ ಆಯ್ಕೆ ಮಾಡಿದ್ದಾನೋ ಆ ಎಕ್ಸ್‌ಚೇಂಜಿನ ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಅವುಗಳ ಅಡಿಯಲ್ಲಿ ನೀಡಿದ ಸುತ್ತೋಲೆಗಳು/ನೋಟಿಸುಗಳ ಅಥವಾ SEBI ನಿಯಮಾವಳಿಗಳು ಮತ್ತು ನಿಬಂಧನೆಗಳ ಅಡಿಯಲ್ಲಿ ಇರುವ ಯಾವುದೇ ಹಕ್ಕುಗಳನ್ನು ಚಲಾಯಿಸುವ ಅಧಿಕಾರವನ್ನು ಹೊಂದಿರುತ್ತಾರೆ.

44. ಈ ಕಾಗದ ಪತ್ರದ ಉಪಬಂಧಗಳು ಕಾಲ ಕಾಲಕ್ಕೆ ಜಾರಿಯಲ್ಲಿರುವ ಯಾವತ್ತೂ ಸರ್ಕಾರಿ ಅಧಿ ಸೂಚನೆಗಳು, SEBI ನೀಡುವ ಯಾವುದೇ ನಿಯಮಾವಳಿಗಳು, ನಿಬಂಧನೆಗಳು, ಮಾರ್ಗದರ್ಶಕಗಳು ಮತ್ತು ಸುತ್ತೋಲೆಗಳು/ನೋಟಿಸುಗಳಿಗೆ ಮತ್ತುಎಲ್ಲಿ ಟ್ರೇಡ್ ನಡೆಯುತ್ತದೋ ಆ ಸ್ಟಾಕ್ ಎಕ್ಸ್‌ಚೇಂಜಿನ ನಿಯಮಾವಳಿಗಳು, ನಿಬಂಧನೆಗಳು, ಮತ್ತು ಬೈಲಾಗಳಿಗೆ ಒಳಪಟ್ಟಿರುತ್ತವೆ.

45. ಸ್ಟಾಕ್ ಬ್ರೋಕರ್ ಮತ್ತು ಗ್ರಾಹಕ ಮಧ್ಯಸ್ಥಿಕೆ ಮತ್ತು ಸಮನ್ವಯ ಕಾಯಿದೆ 1996 ರ ಅಡಿಯಲ್ಲಿ ಜಾರಿಮಾಡಿದ ಯಾವುದೇ ಮಧ್ಯಸ್ಥಿಕೆ ತೀರ್ಪಿಗೆ ಬದ್ಧರಾಗಿರುತ್ತಾರೆ. ಆದರೆ ಈ ತೀರ್ಪಿನ ಬಗ್ಗೆ ಯಾವುದೇ ಪಕ್ಷಕ್ಕೆ ಅಸಮಾಧನವಿದ್ದರೆ ಸ್ಟಾಕ್ ಎಕ್ಸ್‌ಚೇಂಜುಗಳ ಒಳಗೇ ಅಪೀಲಿಗೆ ಒಂದು ಅವಕಾಶವಿದೆ.

46. ಈ ಕಾಗದ ಪತ್ರದಲ್ಲಿ ಬಳಸಿರುವ ಆದರೆ ನಿರ್ದಿಷ್ಟವಾಗಿ ವಿವರಿಸಿರದ ಪದಗಳು ಮತ್ತು ಅಭಿಪ್ರಾಯಗಳಿಗೆ, ಸಂದರ್ಭವು ಅನ್ಯಥಾ ಕೋರದಿದ್ದರೆ, ಎಕ್ಸ್‌ಚೇಂಜುಗಳು/SEBI ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಸುತ್ತೋಲೆಗಳು / ನೋಟಿಸುಗಳಲ್ಲಿ ನಿಯೋಜಿಸಿರುವ ಅರ್ಥವನ್ನೇ ಹೊಂದಿರುತ್ತವೆ.

47. ಸ್ಟಾಕ್ ಬ್ರೋಕರ್ ಸೇರಿಸಿರಬಹುದಾದ ಎಲ್ಲ ಹೆಚ್ಚುವರಿ ಸ್ವಯಂಪ್ರೇರಿತ ಕಲಮುಗಳು/ಕಾಗದ ಪತ್ರಗಳು ಎಕ್ಸ್‌ಚೇಂಜುಗಳು/SEBI ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಸುತ್ತೋಲೆಗಳು/ನೋಟಿಸುಗಳನ್ನು ಉಲ್ಲಂಘಿಸುವಂತಿರಬಾರದು. ಅಂತಹ ಸ್ವಯಂಪ್ರೇರಿತ ಕಲಮು/ಕಾಗದ ಪತ್ರಗಳಿಗೆ 15 ದಿನಗಳ ಪೂರ್ವಭಾವಿ ನೋಟಿಸನ್ನು ನೀಡಬೇಕು. ಎಕ್ಸ್‌ಚೇಂಜುಗಳು/SEBI ನಿಗದಿ ಪಡಿಸಿರುವ ಹಕ್ಕುಗಳು ಮತ್ತು ಬಾಧ್ಯತೆಗಳಲ್ಲಿ ಏನಾದರೂ ಬದಲಾವಣೆ ಮಾಡುವುದಿದ್ದರೆ ಅದನ್ನು ಗ್ರಾಹಕರ ಗಮನಕ್ಕೆ ತರಬೇಕು.

48. SEBI ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಸುತ್ತೋಲೆಗಳು/ನೋಟಿಸುಗಳ ಅಥವಾ ಸದರಿ ಟ್ರೇಡಿಗೆ ಸಂಬಂಧಪಟ್ಟ ಎಕ್ಸ್‌ಚೇಂಜಿನ ನಿಯಮಾವಳಿಗಳು, ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಸುತ್ತೋಲೆಗಳು/ನೋಟಿಸುಗಳ ಪ್ರಕಾರ ಸಂಬಂಧಪಟ್ಟ ಪಕ್ಷಗಳ ಹಕ್ಕುಗಳು ಮತ್ತು ಬಾಧ್ಯತೆಗಳಲ್ಲಿ ಏನಾದರೂ ವ್ಯತ್ಯಯವಾದರೆ ಈ ಕಾಗದ ಪತ್ರಗಳಲ್ಲಿರುವ ಹಕ್ಕುಗಳು ಮತ್ತು ಬಾಧ್ಯತೆಗಳ ಬಗ್ಗೆ ಬದಲಾದವುಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಭಾವಿಸಲಾಗುತ್ತದೆ.

ಸ್ಟಾಕ್ ಬ್ರೋಕರುಗಳು ಗ್ರಾಹಕನಿಗೆ ಒದಗಿಸುವ ಇಂಟರ್‌ನೆಟ್ ಮತ್ತು ವೈರ್‌ಲೆಸ್ ತಂತ್ರಜ್ಞಾನ ಆಧಾರಿತ ಟ್ರೇಡಿಂಗ್ ಸೌಲಭ್ಯ **(*'ಹಕ್ಕುಗಳು ಮತ್ತು ಬಾಧ್ಯತೆಗಳು'* ಪತ್ರದಲ್ಲಿ ಹೇಳಿರುವ ಎಲ್ಲ ಕಲಮುಗಳೂ ಅನ್ವಯವಾಗುತ್ತವೆ. ಜೊತೆಗೆ ಇಲ್ಲಿ ಹೇಳುವ ಕಲಮುಗಳೂ ಅನ್ವಯವಾಗುತ್ತವೆ).**

1. ಸ್ಟಾಕ್ ಬ್ರೋಕರ್ ಇಂಟರ್‌ನೆಟ್ ಆಧಾರಿತ ಟ್ರೇಡಿಂಗ್ (IBT) ಮತ್ತು ಸೆಕ್ಯುರಿಟೀಸ್ ಟ್ರೇಡಿಂಗ್ ಮಾಡಲು ವೈರ್‌ಲೆಸ್ ತಂತ್ರಜ್ಞಾನ

ಒದಗಿಸಲು ಅರ್ಹನಾಗಿದ್ದು ಇದರಲ್ಲಿ ಬಳಸುವ ಇಂಟರ್‌ನೆಟ್ ಪೋರ್ಟೋಕೊಲೊ (IP) ಡಿವೈಸ್‌ಗಳಾದಂತಹ ಮೊಬೈಲ್ ಫೋನ್, ಡೇಟ ಕಾರ್ಡ್ ಸಹಿತ ಲ್ಯಾಪ್‌ಟಾಪ್, ಇತ್ಯಾದಿ ಸಾಧನಗಳೂ ಸೇರುತ್ತವೆ. ಈ ಬಗ್ಗೆ SEBI ಮತ್ತು ಎಕ್ಸ್‌ಚೇಂಜುಗಳು ಕಾಲ ಕಾಲಕ್ಕೆ ನಿರ್ದಿಷ್ಟವಾಗಿ ತಿಳಿಸುವ ವಯರ್‌ಲೆಸ್ ತಂತ್ರಜ್ಞಾನವನ್ನು ಬಳಸಿದ ಇಂಟರ್‌ನೆಟ್ ಆಧಾರಿತ ಟ್ರೇಡಿಂಗ್/ ಸೆಕ್ಯುರಿಟಿ ಟ್ರೇಡಿಂಗ್‌ಗೆ ಅನ್ವಯಿಸುವ ಎಲ್ಲ ಅಗತ್ಯಗಳನ್ನೂ ಸ್ಟಾಕ್ ಬ್ರೋಕರ್ ಪೂರೈಸಬೇಕು.

2. ಗ್ರಾಹಕನು ಸೆಕ್ಯುರಿಟೀಸ್‌ನಲ್ಲಿ ಹೂಡುವ/ಟ್ರೇಡ್ ಮಾಡುವ ಇಚ್ಛೆಯುಳ್ಳವನಾಗಿರುತ್ತಾನೆ. ಈ ಉದ್ದೇಶಕ್ಕಾಗಿ ಅವನು ಇಂಟರ್‌ನೆಟ್ ಆಧಾರಿತ ಟ್ರೇಡಿಂಗ್ ಸೌಲಭ್ಯ ಅಥವಾ ವೈರ್‌ಲೆಸ್ ತಂತ್ರಜ್ಞಾನ ಬಳಸಿ ಸೆಕ್ಯುರಿಟೀಸ್ ಟ್ರೇಡಿಂಗ್ ಬಳಸಲು ಬಯಸುತ್ತಾನೆ. ಸ್ಟಾಕ್ ಬ್ರೋಕರ್ ಗ್ರಾಹಕನಿಗೆ IBT ಸೇವೆಯನ್ನು ಒದಗಿಸಬೇಕು, ಮತ್ತು ಗ್ರಾಹಕನು ಸ್ಟಾಕ್ ಬ್ರೋಕರನ IBT ಸೇವೆಯನ್ನು ಪಡೆದುಕೊಳ್ಳಬೇಕು. ಆದರೆ ಇದು SEBI/ಎಕ್ಸ್‌ಚೇಂಜುಗಳ ಉಪಬಂಧಗಳಿಗೆ ಮತ್ತು ಸ್ಟಾಕ್ ಬ್ರೋಕರನ IBT ವೆಬ್-ಸೈಟಿನಲ್ಲಿ ಒದಗಿಸಿರುವ ಕರಾರುಗಳು ಮತ್ತು ಷರತ್ತುಗಳಿಗೆ ಬದ್ಧವಾಗಿರುತ್ತದೆ. ಆದರೆ ಮೂಲತಃ ಇವು SEBI/ಎಕ್ಸ್‌ಚೇಂಜುಗಳು ನಿಗದಿಪಡಿಸಿರುವ ಮಾನದಂಡಗಳಿಗೆ ಅನುಸಾರವಾಗಿರಬೇಕು.

3. ಸ್ಟಾಕ್ ಬ್ರೋಕರ್ ವೈರ್‌ಲೆಸ್ ತಂತ್ರಜ್ಞಾನ/ಇಂಟರ್‌ನೆಟ್/ಸ್ಮಾರ್ಟ್ ಆರ್ಡರ್ ರೌಂಟಿಂಗ್ ಅಥವಾ ಇನ್ಯಾವುದೇ ತಂತ್ರಜ್ಞಾನದ ಜೊತೆಗೆ ಬರುವ ಲಕ್ಷಣಗಳು, ಅಪಾಯಗಳು, ಹೊಣೆಗಳು, ಬಾಧ್ಯತೆಗಳು ಮತ್ತು ಜವಾಬ್ದಾರಿಗಳನ್ನು ಗ್ರಾಹಕನ ಗಮನಕ್ಕೆ ತರಬೇಕು.

4. ಆರಂಭದ ಪಾಸ್‌ವರ್ಡನ್ನು ಸ್ಟಾಕ್ ಬ್ರೋಕರನ IBT ಸಿಸ್ಟಂ ತಾನೇ ಉತ್ಪತಿ ಮಾಡುತ್ತದೆ ಮತ್ತು ಇದು ಪಾಸ್‌ವರ್ಡ್ ಪಾಲಿಸಿ SEBI/ಎಕ್ಸ್‌ಚೇಂಜುಗಳ ಮಾನಕಗಳ ಪ್ರಕಾರ ಇದೆಯೆಂದು ಗ್ರಾಹಕನಿಗೆ ತಿಳಿಸಬೇಕು.

5. ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಅನ್ನು ಗೌಪ್ಯವಾಗಿಟ್ಟುಕೊಳ್ಳಬೇಕಾಗಿದ್ದು ಗ್ರಾಹಕನ ಹೊಣೆ. ಅವನು ಅನುಮತಿಸಿರಲಿ ಬಿಡಲಿ ಅವನ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಅನ್ನು ಬಳಸಿ ಸ್ಟಾಕ್ ಬ್ರೋಕರನ IBT ವ್ಯವಸ್ಥೆಯಲ್ಲಿ ನಡೆದ ಎಲ್ಲ ಆದೇಶಗಳು ಮತ್ತು ವ್ಯವಹಾರಗಳಿಗೆ ಗ್ರಾಹಕನೇ ಜವಾಬ್ದಾರ,. ವೈರ್‌ಲೆಸ್ ತಂತ್ರಜ್ಞಾನ ಬಳಸಿ ಆರ್ಡರ್ ರೂಟೆಡ್ ಸಿಸ್ಟಂ ಮೂಲಕ ಮಾಡುವ ಇಂಟರ್‌ನೆಟ್ ಟ್ರೇಡಿಂಗ್/ಸೆಕ್ಯುರಿಟೀಸ್ ಟ್ರೇಡಿಂಗ್‌ಗಳಿಗೆ ಅಧಿಕೃತಗೊಳಿಸುವ ತಂತ್ರಜ್ಞಾನಗಳು ಮತ್ತು ಕಟ್ಟುನಿಟ್ಟಾದ ಸೆಕ್ಯುರಿಟಿ ಕ್ರಮಗಳು ಅಗತ್ಯ ಎಂದು ಗ್ರಾಹಕನಿಗೆ ತಿಳಿದಿರಬೇಕು. ಗ್ರಾಹಕನು ತನ್ನ/ತನ್ನ ಅಧಿಕೃತ ಪ್ರತಿನಿಧಿಯ ಪಾಸ್ ವರ್ಡನ್ನು ಅನ್ಯ ವ್ಯಕ್ತಿಗಳಿಗೆ, ಸ್ಟಾಕ್ ಬ್ರೋಕರನ ಸಿಬ್ಬಂದಿ ಮತ್ತು ಡೀಲರೂಗಳೂ ಸೇರಿದಂತೆ ಬಹಿರಂಗಪಡಿಸುವುದಿಲ್ಲ ಎಂದು ಭರವಸೆ ನೀಡುತ್ತಾನೆ.

6. ಅಕಸ್ಮಾತ್ ಪಾಸ್‌ವರ್ಡ್ ಮರೆತರೆ, IBT ಸಿಸ್ಟಂನಲ್ಲಿ ಸೆಕ್ಯುರಿಟಿ ದೋಷಗಳು ಕಂಡುಬಂದರೆ, ತನ್ನ ಯೂಸರ್ ನೇಮ್/ಪಾಸ್ ವರ್ಡ್/ಖಾತೆ ಬಳಸಿಕೊಂಡು ಅನಧಿಕೃತ ವ್ಯಕ್ತಿಗಳು ವ್ಯವಹರಿಸಿದ್ದಾರೆಂದು ಪತ್ತೆಯಾದರೆ/ಅನುಮಾನಪಟ್ಟರೆ ಗ್ರಾಹಕನು ತಕ್ಷಣವೇ ಸ್ಟಾಕ್ ಬ್ರೋಕರಿಗೆ ಲಿಖಿತವಾಗಿ ತಿಳಿಸಬೇಕು.ಅದರಲ್ಲಿ ದಿನಾಂಕ,ವಿಧಾನ,ಅನಧಿಕೃತ ವ್ಯವಹಾರಗಳು ಇತ್ಯಾದಿ ವಿವರಗಳನ್ನು ನೀಡಬೇಕು.

7. ಸ್ಟಾಕ್ ಬ್ರೋಕರ್ ವೈರ್‌ಲೆಸ್ ತಂತ್ರಜ್ಞಾನ/ಇಂಟರ್‌ನೆಟ್/ಸ್ಮಾರ್ಟ್ ಆರ್ಡರ್ ರೌಂಟಿಂಗ್ ಅಥವಾ ಇನ್ಯಾವುದೇ ತಂತ್ರಜ್ಞಾನದ ಜೊತೆಗೆ ಬರುವ ಲಕ್ಷಣಗಳು, ಅಪಾಯಗಳು, ಹೊಣೆಗಳು, ಬಾಧ್ಯತೆಗಳು ಮತ್ತು ಜವಾಬ್ದಾರಿಗಳು ಗ್ರಾಹಕನಿಗೆ ತಿಳಿದಿರಬೇಕು. ಅವನು ಅನುಮತಿಸಿರಲಿ ಬಿಡಲಿ ಸ್ಟಾಕ್ ಬ್ರೋಕರನ IBT ವ್ಯವಸ್ಥೆಯಲ್ಲಿ ನಡೆದ ಎಲ್ಲಆದೇಶಗಳು ಮತ್ತು ವ್ಯವಹಾರಗಳಿಗೆ ಗ್ರಾಹಕನೇ ಪೂರ್ಣ ಜವಾಬ್ದಾರ,

8. ಗ್ರಾಹಕನು ಕೋರಿದರೆ ಸ್ಟಾಕ್ ಬ್ರೋಕರ್ ಆರ್ಡರ್/ಟ್ರೇಡ್ ಧೃಢೀಕರಣವನ್ನು ಇಮೇಲ್ ಮೂಲಕ ಮಾಡುತ್ತಾನೆ. ಇದು ವೆಬ್ ಪೋರ್ಟಲ್‌ನಲ್ಲೂ ಸಿಗುತ್ತದೆ. ಒಂದೊಮ್ಮೆ ಗ್ರಾಹಕನು ವೈರ್‌ಲೆಸ್ ತಂತ್ರಜ್ಞಾನವನ್ನು ಬಳಸುತ್ತಿದ್ದರೆ ಸ್ಟಾಕ್ ಬ್ರೋಕರ್ ಆರ್ಡರ್/ಟ್ರೇಡ್ ಧೃಢೀಕರಣವನ್ನು ಗ್ರಾಹಕನ ಸಾಧನಕ್ಕೆ ಕಳುಹಿಸುತ್ತಾನೆ.

9. ಇಂಟರ್‌ನೆಟ್ ಮೂಲಕ ಟ್ರೇಡಿಂಗ್ ಎಂದರೆ ಅನೇಕ ಅನಿಶ್ಚಿತತೆಗಳು ಮತ್ತು ಸಂಕೀರ್ಣ ಹಾರ್ಡ್‌ವೇರ್, ಸಾಫ್ಟ್‌ವೇರ್, ಸಿಸ್ಟಂಗಳು, ಸಂವಹನೆಯ ಲೈನುಗಳು, ಇತ್ಯಾದಿ ಇರುತ್ತವೆ. ಇವು ಅಡಚಣೆ ಮತ್ತು ಸ್ಥಳಾಂತರಗಳಿಂದ ಕೂಡಿರುತ್ತವೆ ಎಂಬುದ ಗ್ರಾಹಕನಿಗೆ ತಿಳಿದಿರಬೇಕು. ಯಾವುದೇ ಅಡಚಣೆ ಇಲ್ಲದೆ ಸದಾ ಕಾಲ ಗ್ರಾಹಕನಿಗೆ IBT ಸೇವೆಗಳನ್ನು ಒದಗಿಸಲಾಗುತ್ತದೆ ಎಂದು ಸ್ಟಾಕ್ ಬ್ರೋಕರ್/ಎಕ್ಸ್‌ಚೇಂಜ್ ಯಾವುದೇ ಭರವಸೆ ನೀಡುವುದಿಲ್ಲ.

10. ಸ್ಟಾಕ್ ಬ್ರೋಕರನ IBT ಸಿಸ್ಟಂ ಅಥವಾ ಸೇವೆ ಅಥವಾ ಎಕ್ಸ್‌ಚೇಂಜಿನ ಸೇವೆಗಳ ಅಮಾನತ್ತು, ಅಡಚಣೆ, ಅಲಭ್ಯತೆ ಅಥವಾ ತಪ್ಪು ನಿರ್ವಹಣೆಗೆ ಅಥವಾ ಎಕ್ಸ್‌ಚೇಂಜ್/ಸ್ಟಾಕ್ ಬ್ರೋಕರ್‌ನ ನಿಯಂತ್ರಣದಲ್ಲಿಲ್ಲದ ಕಾರಣದಿಂದ ಗ್ರಾಹಕ/ಎಕ್ಸ್‌ಚೇಂಜ್/ಸ್ಟಾಕ್ ಬ್ರೋಕರ್

ಕಡೆ ಏನಾದರೂ ಸಂಪರ್ಕ/ಸಿಸ್ಟಂ ವೈಫಲ್ಯವಾದರೆ, ಗ್ರಾಹಕನಿಗೆ ಎಕ್ಸ್‌ಚೇಂಜ್/ಸ್ಟಾಕ್ ಬ್ರೋಕರ್ ವಿರುದ್ಧ ಯಾವುದೇ ಕ್ಲೇಮ್ ಇರುವುದಿಲ್ಲ

ಅನುಬಂಧ 5

## ಬಂಡವಾಳ ಮಾರುಕಟ್ಟೆ ಮತ್ತು ಡೆರಿವೇಟೀವ್ ಕ್ಷೇತ್ರಗಳಲ್ಲಿ ಅಪಾಯದ ಅನಾವರಣ ದಾಖಲೆ

ಈ ದಾಖಲೆಯು ಸ್ಟಾಕ್ ಎಕ್ಸ್ ಚೇಂಜ್ ಗಳ ಈಕ್ವಿಟೀಸ್/ಡೆರಿವೇಟೀವ್ ಕ್ಷೇತ್ರಗಳಲ್ಲಿ ವಹಿವಾಟಿನ ಬಗ್ಗೆ ಮುಖ್ಯವಾದ ಮಾಹಿತಿಯನ್ನು ಒಳಗೊಂಡಿದೆ. ಎಲ್ಲಾ ಭಾವಿ ಹೂಡಿಕೆದಾರರು ಎಕ್ಸ್ ಚೇಂಜ್ ಗಳ ಈಕ್ವಿಟಿ/ಡೆರಿವೇಟೀವ್ ಕ್ಷೇತ್ರಗಳಲ್ಲಿ ವಹಿವಾಟನ್ನು ನಡೆಸುವ ಮುನ್ನ ಈ ದಾಖಲೆಯನ್ನು ಓದತಕ್ಕದ್ದು.

ಸ್ಟಾಕ್ ಎಕ್ಸ್ ಚೇಂಜ್‌ಗಳು/SEBIಯು ಒಂಟಿಯಾಗಿ ಅಥವಾ ಜಂಟಿಯಾಗಿ, ವ್ಯಕ್ತವಾಗಿ ಅಥವಾ ಪರೋಕ್ಷವಾಗಿ, ಈ ಅನಾವರಣ ದಾಖಲೆಯ ಪರಿಪೂರ್ಣತೆ, ಸಮರ್ಪಕತೆ ಅಥವಾ ನಿಖರತೆಯ ಬಗ್ಗೆ ಯಾವುದೇ ಖಾತರಿಗಳನ್ನು ಅಥವಾ ಪ್ರತಿನಿಧಿತ್ವವನ್ನು ಮಾಡುವುದಿಲ್ಲ ಮತ್ತು ಸ್ಟಾಕ್ ಎಕ್ಸ್ ಚೇಂಜ್‌ಗಳು/SEBIಯು ವಹಿವಾಟು ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವುದರ ಲಾಭಗಳ ಬಗ್ಗೆ ಅನುಮೋದನೆ ಅಥವಾ ಹೇಳಿಕೆಯನ್ನು ನೀಡುವುದಿಲ್ಲ. ಈ ಸಂಕ್ಷಿಪ್ತ ವಾಕ್ಯವು ವಹಿವಾಟಿನ ಎಲ್ಲಾ ಅಪಾಯಗಳು ಮತ್ತು ಇತರ ಗಣನೀಯ ಅಂಶಗಳನ್ನು ಅನಾವರಣಗೊಳಿಸುವುದಿಲ್ಲ.

ಇಲ್ಲಿ ಇರುವ ಅಪಾಯವನ್ನು ಮನಗಂಡು, ನೀವು ಪ್ರವೇಶಿಸುತ್ತಿರುವ ಸಂಬಂಧದ ರೀತಿಯನ್ನು ಅರಿತುಕೊಂಡ ಮತ್ತು ನೀವು ಎದುರಿಸುವ ಅಪಾಯವನ್ನು ತಿಳಿದುಕೊಂಡ ನಂತರವೇ ನೀವು ವ್ಯವಹಾರವನ್ನುನಡೆಸಬೇಕು.

ಸ್ಟಾಕ್ ಎಕ್ಸ್ ಚೇಂಜ್ ನಲ್ಲಿ ವಹಿವಾಟನ್ನು ನಡೆಸಲಾಗುವಂಥ ಈಕ್ವಿಟಿ ಶೇರ್, ಡೆರಿವೇಟೀವ್ ಕರಾರುಗಳು ಅಥವಾ ಇತರ ಸಾಧನಗಳಲ್ಲಿ ವಿವಿಧ ರೀತಿಯ ಅಪಾಯಗಳಿದ್ದು, ಮಿತವಾದ ಸಂಪನ್ಮೂಲ/ಬಂಡವಾಳ ಮತ್ತು/ಅಥವಾ ವಹಿವಾಟಿನ ಅನುಭವ ಮತ್ತು ಮಿತವಾದ ಅಪಾಯ ಸಹನಶಕ್ತಿ ಉಳ್ಳಂತಹ ವ್ಯಕ್ತಿಗಳಿಗೆ ಅವುಗಳಲ್ಲಿ ವಹಿವಾಟನ್ನು ನಡೆಸುವುದ ಸೂಕ್ತವಾದ ಮಾರ್ಗ ಯಾವುದು ಎಂಬುದನ್ನು ನೀವು ತಿಳಿದುಕೊಂಡು ಗ್ರಹಿಸಬೇಕು. ಆದ್ದರಿಂದ, ನಿಮ್ಮ ಹಣಕಾಸಿನ ಸ್ಥಿತಿಯನ್ನು ಆಧರಿಸಿ ಇಂತಹ ವಹಿವಾಟು ನಿಮಗೆ ಸೂಕ್ತವಾಗಿದೆಯೇ ಎಂದು ನೀವೇ ಪರಿಗಣಿಸಬೇಕು. ನೀವು ಸ್ಟಾಕ್ ಎಕ್ಸ್ ಚೇಂಜ್ ನಲ್ಲಿ ವಹಿವಾಟನ್ನು ನಡೆಸಿ, ಪ್ರತಿಕೂಲ ಪರಿಣಾಮವನ್ನು ಎದುರಿಸಿದರೆ ಅಥವಾ ನಷ್ಟವನ್ನು ಅನುಭವಿಸಿದ ಪಕ್ಷದಲ್ಲಿ ಅದಕ್ಕೆ ನೀವೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತೀರಿ, ಮತ್ತು ಸ್ಟಾಕ್ ಎಕ್ಸ್ ಚೇಂಜ್/ಅವುಗಳ ಇತರೆ ಸಂಸ್ಥೆಗಳು ಮತ್ತು/ಅಥವಾ SEBIಯು, ಯಾವುದೇ ರೀತಿಯಲ್ಲಿ ಅದಕ್ಕೆ ಜವಾಬ್ದಾರರಾಗಿರುವುದಿಲ್ಲ ಮತ್ತು ಈ ಬಗ್ಗೆ ಇರುವ ಅಪಾಯಗಳನ್ನು ಸರಿಯಾಗಿ ಅನಾವರಣಗೊಳಿಸಿಲ್ಲ ಅಥವಾ ನಿಮ್ಮ ಸ್ಟಾಕ್ ದಳ್ಳಾಳಿಯು ಇದರಲ್ಲಿರುವ ಅಪಾಯವನ್ನು ಸಂಪೂರ್ಣವಾಗಿ ನಿಮಗೆ ವಿವರಿಸಲಿಲ್ಲ ಎಂಬ ವಾದವನ್ನು ನೀವು ಮಂಡಿಸುವಂತಿಲ್ಲ. ಉಂಟಾಗುವ ಪರಿಣಾಮಗಳಿಗೆ ಹೂಡಿಕೆದಾರರೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ ಮತ್ತು ಒಪ್ಪಿಕೊಂಡ ಕರಾರನ್ನು ಈ ಕಾರಣಕ್ಕಾಗಿ ವಜಾ ಮಾಡಲಾಗುವುದಿಲ್ಲ. ಸ್ಟಾಕ್ ಎಕ್ಸ್ ಚೇಂಜ್ ಗಳಲ್ಲಿ ವಹಿವಾಟಾಗುವ ಯಾವುದೇ ಡೆರಿವೇಟಿವ್ ಕರಾರಿನ ಮಾರಾಟ ಮತ್ತು/ಅಥವಾ ಕೊಳ್ಳುವಿಕೆಯ ಆದೇಶವನ್ನು ಅನುಷ್ಠಾನಗೊಳಿಸುವುದರಿಂದ ಯಾವುದೇ ಲಾಭಗಳ ಬಗ್ಗೆ ಅಥವಾ ನಷ್ಟಗಳಿಂದ ವಿನಾಯಿತಿಯ ಖಾತರಿಯನ್ನು ನೀಡಲಾಗುವುದಿಲ್ಲ ಎಂಬುದನ್ನು ನೀವು ಅಂಗೀಕರಿಸಿ, ಸ್ವೀಕರಿಸಬೇಕು.

ಒಬ್ಬ ಸ್ಟಾಕ್ ದಳ್ಳಾಳಿಯ ಮೂಲಕ ಸ್ಟಾಕ್ ಎಕ್ಸ್ ಚೇಂಜ್ ನಲ್ಲಿ ನೀವು ನಡೆಸುವ ವ್ಯವಹಾರಗಳು, ಸ್ಟಾಕ್ ದಳ್ಳಾಳಿಯು ಸೂಚಿಸಿರುವಂತಹ ಕೆಲವು ನಿಯಮಗಳಿಗೆ ಒಳಪಟ್ಟಿರುವುದರಿಂದ , ಇವುಗಳು ನೀವು ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ ಪತ್ರವನ್ನು ಭರ್ತಿ ಮಾಡುವುದು , ಹಕ್ಕುಗಳು ಮತ್ತು ಬಾಧ್ಯತೆಗಳನ್ನು ಓದುವುದು, ಮಾಡಿ ಮತ್ತು ಮಾಡಬೇಡಿ ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಮತ್ತು SEBIಯು ಸೂಚಿಸಿರುವಂತಹ ಮತ್ತುಕಾಲಕಾಲಕ್ಕೆ ಜಾರಿಯಲ್ಲಿರುವಂತಹ ಸಂಬಂಧಪಟ್ಟ ಸ್ಟಾಕ್ ಎಕ್ಸ್ ಚೇಂಜ್, ಅವುಗಳ ತೀರುವೆ ಸಂಸ್ಥೆಗಳ ನಿಯಮಗಳು, ಉಪ-ನಿಯಮಗಳು ಮತ್ತು ವಿಧೇಯಕ ಮತ್ತು ಮಾರ್ಗಸೂಚಿಗಳಿಗೆ ಮತ್ತು ಸ್ಟಾಕ್ ಎಕ್ಸ್ ಚೇಂಜ್ ಅಥವಾ ಅವುಗಳ ತೀರುವೆ ಸಂಸ್ಥೆಗಳು ನೀಡುವ ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಸುತ್ತೋಲೆಗಳಿಗೆ ಒಳಪಟ್ಟಿರುತ್ತವೆ ಎಂಬುದನ್ನು ನೀವು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು.

ಸ್ಟಾಕ್ ಎಕ್ಸ್ ಚೇಂಜ್ ಗಳು ಯಾವುದೇ ಸಲಹೆಗಳನ್ನು ನೀಡುವುದಿಲ್ಲ ಅಥವಾ ನೀಡುವ ಇಂಗಿತವಿರುವುದಿಲ್ಲ ಮತ್ತು ಈ ದಾಖಲೆಯಲ್ಲಿರುವ ಮಾಹಿತಿಯನ್ನು ಆಧರಿಸಿ ಯಾವುದೇ ವ್ಯಕ್ತಿಯು, ಸ್ಟಾಕ್ ಎಕ್ಸ್ ಚೇಂಜ್ ಗಳ ಯಾವುದೇ ಸ್ಟಾಕ್ ದಳ್ಳಾಳಿಯೊಡನೆ ಮತ್ತು/ಅಥವಾ ಯಾವುದೇ ಮೂರನೇ ವ್ಯಕ್ತಿಯೊಡನೆ ಮಾಡಿಕೊಳ್ಳುವ ವ್ಯಾವಹಾರಿಕ ಸಂಬಂಧಕ್ಕೆ ಜವಾಬ್ದಾರರಾಗಿರುವುದಿಲ್ಲ. ಈ ದಾಖಲೆಯಲ್ಲಿರುವ ಯಾವುದೇ ಮಾಹಿತಿಯನ್ನು ವ್ಯಾವಹಾರಿಕ ಸಲಹೆ ಎಂದು ಪರಿಗಣಿಸಕೂಡದು. ಯಾವುದೇ ವಹಿವಾಟನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೇ ಮತ್ತು ಅದರಲ್ಲಿರುವ ಅಪಾಯಗಳನ್ನು ಪರಿವೀಕ್ಷಿಸದೇ ಅಂತಹ ವಹಿವಾಟನ್ನು ಮಾಡಬಾರದು. ನಿಮಗೆ ಇದರ ಬಗ್ಗೆ ವಿಶ್ವಾಸವಿಲ್ಲದಿದ್ದಲ್ಲಿ, ಅದರ ಬಗ್ಗೆ ನೀವು ವೃತ್ತಿಪರ ಸಲಹೆಯನ್ನು ಪಡೆಯಬೇಕು.

ನೀವು ಯಾವುದೇ ವಹಿವಾಟನ್ನು ಮಾಡುವ ಅಥವಾ ಮತ್ತೊಬ್ಬರನ್ನು ನಿಮ್ಮ ಪರವಾಗಿ ಮಾಡಲು ಅಧಿಕಾರ ನೀಡುವ ಮುನ್ನ, ನೀವು ಈ ಕೆಳಕಂಡ ವಿಷಯಗಳ ಬಗ್ಗೆ ಜಾಗೃತರಾಗಿರಬೇಕು ಅಥವಾ ಪರಿಚಯ ಹೊಂದಿರಬೇಕು:

**1. ಪ್ರಾಥಮಿಕ ಅಪಾಯಗಳು:**

**1.1. ಅತಿಯಾದ ಚಂಚಲತೆಯ ಅಪಾಯ:**

ಸ್ಟಾಕ್ ಎಕ್ಸ್ ಚೇಂಜ್ ಗಳಲ್ಲಿ ಯಾವುದೇ ಸೆಕ್ಯೂರಿಟಿ/ಡೆರಿವೇಟೀವ್ ಕರಾರು ವಹಿವಾಟಿಗೆ ಒಳಪಡುವಾಗ ಅದರ ಬೆಲೆಯಲ್ಲಾಗುವ ನಿರಂತರ ಬದಲಾವಣೆಯನ್ನು ಚಂಚಲತೆ ಎನ್ನುತ್ತಾರೆ. ಸಾಮಾನ್ಯವಾಗಿ, ಸೆಕ್ಯೂರಿಟಿ/ಡೆರಿವೇಟೀವ್ ಕರಾರು ಹೆಚ್ಚು ಚಂಚಲವಾದಷ್ಟು, ಅದರ ಬೆಲೆಯ ಬದಲಾವಣೆಯು ಅತಿಯಾಗಿರುತ್ತದೆ. ಕಡಿಮೆ ವಹಿವಾಟು ನಡೆಯುವ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳಲ್ಲಿ ಸಾಮಾನ್ಯವಾಗಿ, ಸಕ್ರಿಯವಾದ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳಿಗೆ ಹೋಲಿಸಿದರೆ, ಹೆಚ್ಚು ಚಂಚಲತೆಯಿರುತ್ತದೆ. ಈ ಚಂಚಲತೆಯ ಪರಿಣಾಮವಾಗಿ, ನಿಮ್ಮ ಆದೇಶವನ್ನು ಭಾಗಶಃ ಅನುಷ್ಠಾನಗೊಳಿಸಲಾಗುತ್ತದೆ ಅಥವಾ ಅದು ಅನುಷ್ಠಾನವಾಗುವುದೇ ಇಲ್ಲ ಅಥವಾ ನಿಮ್ಮ ಅದೇಶ ಅನುಷ್ಠಾನಗೊಂಡ ಬೆಲೆಯು, ಕಡೆಯದಾಗಿ ವಹಿವಾಟು ನಡೆದ ಬೆಲೆಗಿಂತ ಗಣನೀಯವಾಗಿ ಭಿನ್ನವಾಗಿರಬಹುದು ಅಥವಾ ನಂತರ ಗಣನೀಯವಾಗಿ ಬದಲಾಗಬಹುದು, ಮತ್ತು ಇದರಿಂದ ನಿಮಗೆ ಕಾಲ್ಪನಿಕ ಅಥವಾ ವಾಸ್ತವಿಕ ನಷ್ಟವುಂಟಾಗಬಹುದು .

**1.2 ಕಡಿಮೆ ದ್ರವ್ಯತೆಯ ಅಪಾಯ**

ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳನ್ನು ಸ್ಪರ್ಧಾತ್ಮಕ ಬೆಲೆಗಳಲ್ಲಿ ಮತ್ತು ಕನಿಷ್ಠ ಬೆಲೆಯ ವ್ಯತ್ಯಾಸಗಳಲ್ಲಿ ತ್ವರಿತವಾಗಿ ಕೊಳ್ಳಲು ಮತ್ತು/ಅಥವಾ ಮಾರಲು ಮಾರುಕಟ್ಟೆಯ ಸಹಭಾಗಿಗಳ ಸಾಮರ್ಥ್ಯವನ್ನು ದ್ರವೀಯತೆ ಎನ್ನುತ್ತಾರೆ. ಸಾಮಾನ್ಯವಾಗಿ, ಮಾರುಕಟ್ಟೆಯಲ್ಲಿ ಹೆಚ್ಚು ಆದೇಶಗಳು ಲಭ್ಯವಿದ್ದರೆ, ದ್ರವೀಯತೆ ಹೆಚ್ಚಿರುತ್ತದೆ ಎಂದು ತಿಳಿದುಕೊಳ್ಳಲಾಗುತ್ತದೆ. ದ್ರವ್ಯತೆಯು ಬಹಳ ಮುಖ್ಯವಾದದ್ದು, ಏಕೆಂದರೆ, ದ್ರವ್ಯತೆಯು ಹೆಚ್ಚಿದರೆ, ಹೂಡಿಕೆದಾರರಿಗೆ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳನ್ನು ಶೀಘ್ರವಾಗಿ ಮತ್ತು ಕನಿಷ್ಠ ಬೆಲೆಯ ವ್ಯತ್ಯಾಸದ ಲ್ಲಿ ಕೊಳ್ಳಲು ಮತ್ತು/ಅಥವಾ ಮಾರಲು ಸಾಧ್ಯವಾಗುವುದು ಮತ್ತುಇದರ ಪರಿಣಾಮವಾಗಿ, ಹೂಡಿಕೆದಾರರು ತಾವು ಕೊಂಡ ಅಥವಾ ಮಾರಿದ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳಿಗೆ ಸ್ಪರ್ಧಾತ್ಮಕ ಬೆಲೆಯನ್ನುನೀಡುತ್ತಾರೆ ಅಥವಾ ಪಡೆಯುತ್ತಾರೆ. ಸಕ್ರಿಯವಾದ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳಿಗೆ ಹೋಲಿಸಿದರೆ, ಕೆಲವು ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳಿಗೆ ಕಡಿಮೆ ದ್ರವ್ಯತೆಯ ಅಪಾಯವಿರಬಹುದು. ಇದರ ಪರಿಣಾಮವಾಗಿ. ಆದೇಶವನ್ನು ಭಾಗಶಃ ಅನುಷ್ಠಾನಗೊಳಿಸಲಾಗುತ್ತದೆ ಅಥವಾ ಅದು ಅನುಷ್ಠಾನವಾಗುವುದು ಇಲ್ಲ ಅಥವಾ ನಿಮ್ಮ ಆದೇಶ ಅನುಷ್ಠಾನಗೊಂಡ ಬೆಲೆಯು, ಕಡೆಯದಾಗಿ ವಹಿವಾಟು ನಡೆದ ಬೆಲೆಗಿಂತ ಗಣನೀಯವಾಗಿ ಭಿನ್ನವಾಗಿರಬಹುದು .

1.2.1 ದಿನದ ವಹಿವಾಟಿನ ಕಾರ್ಯತಂತ್ರದ ಭಾಗವಾಗಿ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳನ್ನು ಕೊಳ್ಳುವುದು ಅಥವಾ ಮಾರುವುದರಿಂದ ನಷ್ಟವುಂಟಾಗಬಹುದು, ಕಾರಣ, ಅಂತಹ ಪರಿಸ್ಥಿತಿ ಗಳಲ್ಲಿ, ನಿರೀಕ್ಷಿತ ದರಗಳಿಗೆ ಹೋಲಿಸಿದರೆ, ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳನ್ನು ಕಡಿಮೆ/ಹೆಚ್ಚು ದರಗಳಲ್ಲಿ ಕೊಂಡು/ಮಾರಬೇಕಾಗಬಹುದು, ಏಕೆಂದರೆ ಇದರಿಂದ ಸೆಕ್ಯೂರಿಟಿ/ಡೆರಿವೇಟೀವ್ ಕರಾರನ್ನು ನೀಡಲು ಅಥವಾ ಪಡೆಯಲು ಯಾವುದೇ ತೆರೆದ ಸ್ಥಿತಿ ಅಥವಾ ಬಾಧ್ಯತೆ ಇರುವುದಿಲ್ಲ.

**1.3 ಬಹಳ ಅಂತರಗಳ ಅಪಾಯ:**

ಅಂತರ ಎಂದರೆ ಉತ್ತಮವಾದ ಕೊಳ್ಳುವ ಮತ್ತು ಉತ್ತಮವಾದ ಮಾರುವ ಬೆಲೆಗಳಲ್ಲಿನ ವ್ಯತ್ಯಾಸ. ಒಂದು ಸೆಕ್ಯೂರಿಟಿ/ಡೆರಿವೇಟೀವ್ ಕರಾರನ್ನು ಕೊಳ್ಳುವ ಬೆಲೆಗೂ ಮತ್ತು ತಕ್ಷಣವೇ ಅದನ್ನು ಮಾರುವ ಬೆಲೆಗೂ ಇರುವ ವ್ಯತ್ಯಾಸವನ್ನು ಅದು ಸೂಚಿಸುತ್ತದೆ. ಕಡಿಮೆ ದ್ರವೀಯತೆ ಮತ್ತು ಹೆಚ್ಚಾದ ಚಂಚಲತೆಯು ಕಡಿಮೆ ದ್ರವೀಯತೆ ಅಥವಾ ದ್ರವೀಯತೆ ಇಲ್ಲದ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳಿಗೆ ಸಾಮಾನ್ಯಕ್ಕಿಂತ ಹೆಚ್ಚಾದ ಅಂತರವನ್ನುಂಟುಮಾಡುತ್ತದೆ. ಇದರಿಂದ ಸರಿಯಾದ ಬೆಲೆಯ ಮಾಹಿತಿ ದೊರಕುವುದಿಲ್ಲ.

**1.4 ಅಪಾಯ ಕಡಿಮೆಗೊಳಿಸುವ ಆದೇಶಗಳು:**

ವಹಿವಾಟಿನಲ್ಲಿ ಉಂಟಾಗುವ ನಷ್ಟಗಳನ್ನು ಒಂದು ನಿರ್ದಿಷ್ಟ ಮೊತ್ತಕ್ಕೆ ಮಿತಗೊಳಿಸುವ ಉದ್ದೇಶದಿಂದ ನೀಡಲಾದ ಆದೇಶಗಳು (ಉದಾ : ಸ್ಟಾಪ್ ಲಾಸ್ ಆದೇಶ, ಲಿಮಿಟ್ ಆದೇಶ) ಪರಿಣಾಮಕಾರಿಯಾಗಲಾರವು, ಏಕೆಂದರೆ,ಮಾರುಕಟ್ಟೆಯ ಪರಿಸ್ಥಿತಿಗಳಲ್ಲಿ ಉಂಟಾಗುವ ಶೀಘ್ರ ಬದಲಾವಣೆಗಳು ಇಂತಹ ಆದೇಶಗಳನ್ನು ಜಾರಿಗೊಳಿಸುವುದನ್ನು ಅಸಾಧ್ಯವಾಗಿಸುತ್ತವೆ.

1.4.1 ಒಂದು ಮಾರುಕಟ್ಟೆ ಆದೇಶವನ್ನು ಕೂಡಲೇ, ಬೆಲೆಗೆ ಗಮನ ಕೊಡದೇ ಅನುಷ್ಠಾನಗೊಳಿಸಲಾಗುವುದು, ಎದುರಿನ ಪಕ್ಷದಲ್ಲಿ ಅಂತಹ ಆದೇಶಗಳು ಲಭ್ಯವಿದ್ದಲ್ಲಿ ಮತ್ತು ಗ್ರಾಹಕರು ಮಾರುಕಟ್ಟೆ ಆದೇಶದ ತಕ್ಷಣದ ಅನುಷ್ಠಾನ ಪಡೆದರೂ, ಬಾಕಿ ಉಳಿದಿರುವ ಆದೇಶಗಳ ಲಭ್ಯವಿರುವ ಬೆಲೆಯಲ್ಲಿ ಅದನ್ನು ಜಾರಿಗೊಳಿಸಲಾಗುವುದು, ಮತ್ತು ಇದು ಆದೇಶದ ಪ್ರಮಾಣ ಮತ್ತು ದರದ ಸಮಯದ ಆದ್ಯತೆಯನ್ನು ಪೂರೈಸಲಾಗುತ್ತದೆ. ಈ ಬೆಲೆಗಳು ಕಡೆಯದಾಗಿ ವಹಿವಾಟು ನಡೆದ ಬೆಲೆಗಿಂತ ಅಥವಾ ಆ ಸೆಕ್ಯೂರಿಟಿ/ಡೆರಿವೇಟೀವ್ ಕರಾರಿನ ಅತ್ಯುತ್ತಮ ಬೆಲೆಗಿಂತ ಗಣನೀಯವಾಗಿ ಭಿನ್ನವಾಗಿರಬಹುದು ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು.

1.4.2 ಲಿಮಿಟ್ ಆದೇಶವನ್ನು ಸೂಚಿಸಲಾದ ಮಿತಿಯ ದರದಲ್ಲಿ ಅಥವಾ ಅದಕ್ಕಿಂತ ಉತ್ತಮವಾದ ದರದಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುವುದು. ಆದರೆ, ಗ್ರಾಹಕರಿಗೆ ಬೆಲೆಯ ರಕ್ಷಣೆ ದೊರೆತರೂ,ಈ ಆದೇಶವನ್ನು ಜಾರಿಗೊಳಿಸುವ ಸಾಧ್ಯತೆಯೂ ಇದೆ.

1.4.3 ಸ್ಟಾಪ್ ಲಾಸ್ ಆದೇಶವನ್ನು ಸಾಮಾನ್ಯವಾಗಿ ಸೆಕ್ಯೂರಿಟಿ/ಡೆರಿವೇಟೀವ್ ಕರಾರಿನ ಸದ್ಯದ ದರದಿಂದ ದೂರವಿಟ್ಟು, ಸೆಕ್ಯೂರಿಟಿ/ಡೆರಿವೇಟೀವ್ ಕರಾರು ಆ ಸ್ಟಾಪ್ ದರವನ್ನು ಮುಟ್ಟಿದಾಗ ಅಥವಾ ಆ ಮೂಲಕ ವಹಿವಾಟುಗೊಂಡಾಗ ಆದೇಶವನ್ನು ಸಕ್ರಿಯಗೊಳಿಸಲಾಗುತ್ತದೆ. ಮಾರುವ ಸ್ಟಾಪ್ ಆದೇಶಗಳನ್ನು ಸಾಧಾರಣವಾಗಿ ಸದ್ಯದ ದರದ ಕೆಳಗೇ ಮಾಡಲಾಗುವುದು ಮತ್ತು ಕೊಳ್ಳುವ ಸ್ಟಾಪ್ ಆದೇಶವನ್ನು ಸಾಮಾನ್ಯವಾಗಿ ಸದ್ಯದ ದರದ ಮೇಲೆಯೇ ಮಾಡಲಾಗುವುದು. ಸೆಕ್ಯೂರಿಟಿ/ಡೆರಿವೇಟೀವ್ ಕರಾರು ಪೂರ್ವನಿರ್ಧಾರಿತ ದರವನ್ನು ಮುಟ್ಟಿದಾಗ, ಅಥವಾ ಅದರ ಮೂಲಕ ವಹಿವಾಟುಗೊಂಡಾಗ, ಸ್ಟಾಪ್ ಲಾಸ್ ಆದೇಶವು ಮಾರುಕಟ್ಟೆ/ಲಿಮಿಟ್ ಆದೇಶವಾಗಿ ಮಾರ್ಪಡುತ್ತದೆ ಮತ್ತು ಮಿತಿಯ ಅಥವಾ ಅದಕ್ಕಿಂತ ಉತ್ತಮ ಸ್ಥಿತಿಯಲ್ಲಿ ಕಾರ್ಯಗತಗೊಳ್ಳುತ್ತದೆ. ಆದರಿಂದ, ಲಿಮಿಟ್ ಆದೇಶವು ಕಾರ್ಯಗತಗೊಳ್ಳುತ್ತದೆ ಎಂಬ ಯಾವ ಖಾತರಿಯೂ ಇಲ್ಲ, ಏಕೆಂದರೆ ಸೆಕ್ಯೂರಿಟಿ/ಡೆರಿವೇಟೀವ್ ಕರಾರು ಪೂರ್ವನಿರ್ಧಾರಿತ ದರವನ್ನು ದಾಟಿ ಹೋಗಬಹುದು, ಹಾಗೂ ಈ ಸ್ಥಿತಿಯಲ್ಲಿ ಈ ಆದೇಶವು ಕಾರ್ಯಗತಗೊಳ್ಳದ ಅಪಾಯವು ಉದ್ಭವಿಸುತ್ತದೆ, ಸಾಧಾರಣ ಲಿಮಿಟ್ ಅದೇಶದಂತೆ.

**1.5 ಸುದ್ದಿ ಘೋಷಣೆಗಳ ಅಪಾಯ:**

ಸುದ್ದಿ ಘೋಷಣೆಗಳು ಸೆಕ್ಯೂರಿಟಿ/ಡೆರಿವೇಟೀವ್ ಕರಾರಿನ ದರದ ಮೇಲೆ ವಹಿವಾಟು ನಡೆಯುವ ಸಮಯದಲ್ಲಿ ಪರಿಣಾಮ ಬೀರಬಹುದು ಮತ್ತು ಕಡಿಮೆ ದ್ರವೀಯತೆ ಮತ್ತು ಹೆಚ್ಚು ಚಂಚಲತೆಯೊಡನೆ ಕೂಡಿ, ಸೆಕ್ಯೂರಿಟಿ/ಡೆರಿವೇಟೀವ್ ಕರಾರಿನ ದರವು ಹಠಾತ್ತನೆ ಮೇಲೆ ಅಥವಾ ಕೆಳಗೆ ಹೋಗುವಂತೆ ಮಾಡಬಹುದು.

**1.6 ವದಂತಿಗಳ ಅಪಾಯ:**

ಸಂಸ್ಥೆಗಳ/ಹಣದ ಬಗ್ಗೆ ಕೆಲವು ಸಮಯ ವದಂತಿಗಳು ಬಾಯಿಮಾತಿನಿಂದ, ದಿನಪತ್ರಿಕೆಗಳ ಮೂಲಕ, ಜಾಲತಾಣಗಳ ಮೂಲಕ ಅಥವಾ ಸುದ್ದಿ ಮಾಧ್ಯಮಗಳ ಮೂಲಕ ಮಾರುಕಟ್ಟೆಗಳಲ್ಲಿ ಹರಡುತ್ತವೆ. ಈ ಬಗ್ಗೆ ಹೂಡಿಕೆದಾರರು ಜಾಗೃತರಾಗಿದ್ದು ,ಈ ವದಂತಿಗಳ ಆಧಾರದ ಮೇಲೆ ಕ್ರಮ ಕೈಗೊಳ್ಳಬಾರದು.

**1.7 ವ್ಯವಸ್ಥೆಯ ಅಪಾಯ:**

ಮಾರುಕಟ್ಟೆ ತೆರೆದಾಗ ಮತ್ತು ಮಾರುಕಟ್ಟೆ ಮುಚ್ಚುವ ಮುನ್ನ, ಅತ್ಯಧಿಕ ಪ್ರಮಾಣದಲ್ಲಿ ವಹಿವಾಟು ನಡೆಯುತ್ತದೆ. ಇಂಥ ಪ್ರಮಾಣದ ವಹಿವಾಟು ದಿನದ ಯಾವುದೇ ಸಮದಲ್ಲಿಯೂ ಆಗಬಹುದು .ಇವುಗಳು ಆದೇಶ ಕಾರ್ಯಗತಗೊಳ್ಳುವಲ್ಲಿ ಅಥವಾ ಖಾತರಿಯಲ್ಲಿ ವಿಳಂಬವನ್ನುಟುಮಾಡಬಹುದು. ಉಂಟಾಗುವ ಚಂಚಲತೆಯ ಸಮಯಗಳಲ್ಲಿ, ಆದೇಶ ಕಾರ್ಯ ಕೈಗೊಳ್ಳುವಲ್ಲಿ ಅಥವಾ ಖಾತರಿಯಲ್ಲಿ ವಿಳಂಬವನ್ನುಂಟುಮಾಡಬಹುದು .

1.7.2 ಕೆಲವು ಮಾರುಕಟ್ಟೆಯ ಸ್ಥಿತಿಗಳಲ್ಲಿ, ಕೊಳ್ಳುವ ಅಥವಾ ಮಾರುವ ಭಾಗದಲ್ಲಿ ಯಾವುದೇ ಬಾಕಿಯ ಆದೇಶಗಳಿಲ್ಲದೇ ಇದ್ದಾಗ, ಅಥವಾ ಸಾಮಾನ್ಯ ವಹಿವಾಟಿನ ಕಾರಣದಿಂದಾಗಿ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳ ವಹಿವಾಟನ್ನು ನಿಲ್ಲಿಸಿದಾಗ ಅಥವಾ ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳು ಸರ್ಕಿಟ್ ಫಿಲ್ಟರ್ ಮುಟ್ಟಿದಾಗ ಅಥವಾ ಇನ್ಯಾವುದು ಕಾರಣಗಳಿಗೆ, ಮಾರುಕಟ್ಟೆಯಲ್ಲಿ ಒಂದು ವಹಿವಾಟನ್ನು ನ್ಯಾಯಸಮ್ಮತ ದರದಲ್ಲಿ ದ್ರವವಾಗಿಸುವುದು ಅಸಾಧ್ಯವಾಗಬಹುದು .

**1.8 ವ್ಯವಸ್ಥೆ/ಜಾಲದ ದಟ್ಟಣೆ:**

ಎಕ್ಸ್ ಚೇಂಜ್ ಗಳಲ್ಲಿ ವಹಿವಾಟುಗಳು, ಆದೇಶಗಳನ್ನು ನೀಡಲು ಮತ್ತು ಮಾರ್ಗಯೋಜನೆ ಮಾಡಲು ವಿದ್ಯುನ್ಮಾನ ವಿಧಾನದಲ್ಲಿ ನಡೆದ, ಉಪಗ್ರಹ/ಲೀಸ್ಡ್ ಲೈನ್ ಆಧಾರಿ ಸಂವಹನವನ್ನು ಆಧರಿಸುತ್ತದೆ ಮತ್ತು ತಂತ್ರಜ್ಞಾನ ಮತ್ತು ಗಣಕಯಂತ್ರಗಳನ್ನು ಬಳಸಿಕೊಳ್ಳುತ್ತದೆ . ಆದ್ದರಿಂದ, ಸಂವಹನದ ವೈಫಲ್ಯ ಅಥವಾ ವ್ಯವಸ್ಥೆಯ ಸಮಸ್ಯೆಗಳು ಅಥವಾ ವ್ಯವಸ್ಥೆಯಿಂದ ನಿಧಾನವಾದ ಅಥವಾ ವಿಳಂಬವಾದ ಮಾಹಿತಿ ಅಥವಾ ವಹಿವಾಟಿನ ನಿಲುಗಡೆ ಅಥವಾ ವ್ಯವಸ್ಥೆ/ಜಾಲದೊಂದಿಗೆ ಸಂಪರ್ಕವನ್ನು ಸಾಧಿಸಲಾಗದಂಥ ಇನ್ಯಾವುದೋ ಸಮಸ್ಯೆಯ ಸಾಧ್ಯತೆಗಳಿಂದ, ಇವುಗಳು ನಿಯಂತ್ರಣದ ಆಚೆಗಿದ್ದು, ಇದರಿಂದ ಕೊಳ್ಳುವ ಅಥವಾ ಮಾರುವ ಆದೇಶಗಳ ಕಾರ್ಯಗತವಾಗುವುದರಲ್ಲಿ ವಿಳಂಬವಾಗಬಹುದು ಅಥವಾ ಅವನ್ನು ಭಾಗಶಃ ಅಥವಾ ಪೂರ್ಣವಾಗಿ ಕಾರ್ಯಗತಗೊಳಿಸಲು ಸಾಧ್ಯವಾಗದಿರಬಹುದು. ನೀವು ಗಮನಿಸಬೇಕಾದ ಅಂಶವೆಂದರೆ, ಈ ಸಮಸ್ಯೆಗಳು ತಾತ್ಕಾಲಿಕವಾಗಿದ್ದರೂ, ನಿಮ್ಮಲ್ಲಿ ಬಾಕಿಯಿರುವ ತೆರೆದ ಸ್ಥಿತಿ ಅಥವಾ ಕಾರ್ಯಗತಗೊಳಿಸದ ಆದೇಶಗಳಿದ್ದಾಗ, ಈ ಎಲ್ಲಾ ಕಾರ್ಯಗತಗೊಳಿಸಲಾದ ವಹಿವಾಟುಗಳನ್ನು ಕ್ರಮಗೊಳಿಸಲು ನಿಮಗೆ ಬಾಧ್ಯತೆಯಿರುವುದರಿಂದ ಇದು ಅಪಾಯವನ್ನೊಡ್ಡಬಹುದು.

**2. ಡೆರಿವೇಟೀವ್ ಕ್ಷೇತ್ರಕ್ಕೆಸಂಬಂಧಿಸಿದಂತೆ, ಈ ಕೆಳಕಂಡ ಹೆಚ್ಚುವರಿ ಅಂಶಗಳನ್ನು ಗಮನಿಸಿ ಮತ್ತು ಪರಿಚಯ ಮಾಡಿಕೊಳ್ಳಿರಿ:**

**2.1 "ಲೀವರೇಜ್" ಅಥವಾ "ಗೇರಿಂಗ್‌ನ" ಪರಿಣಾಮಗಳು:**

ಡೆರಿವೇಟೀವ್ ಮಾರುಕಟ್ಟೆಯಲ್ಲಿ, ಡೆರಿವೇಟಿವ್‌ನ ಕರಾರಿನ ಮೌಲ್ಯಕ್ಕೆ ಹೋಲಿಸಿದಂತೆ ಅಧಿಕಾಂಶವು ಸಣ್ಣದಾಗಿರುವುದರಿಂದ, ಈ ವಹಿವಾಟನ್ನು ಲೀವರೇಜ್ ಅಥವಾ ಗೇರ್ ಆಗಿದೆ ಎನ್ನಲಾಗುತ್ತದೆ. ಸಣ್ಣ ಅಧಿಕಾಂಶದಿಂದ ಕೈಗೊಳ್ಳಲಾಗುವ ಡೆರಿವೇಟೀವ್ ವಹಿವಾಟುಗಳು, ಅಧಿಕಾಂಶಕ್ಕೆ ಹೋಲಿಸಿದಂತೆ ಹೆಚ್ಚು ಲಾಭ ಅಥವಾ ನಷ್ಟದ ಸಾಧ್ಯತೆಯನ್ನು ನೀಡುತ್ತದೆ. ಆದರೆ ಡೆರಿವೇಟಿವ್‌ನಲ್ಲಿ ವಹಿವಾಟುಗಳು ಅತ್ಯಧಿಕ ಪ್ರಮಾಣದ ಅಪಾಯವನ್ನು ಹೊಂದಿರುತ್ತದೆ .

ಆದ್ದರಿಂದ, ನೀವು ಡೆರಿವೇಟೀವ್‌ಗಳಲ್ಲಿ ವಹಿವಾಟನ್ನು ನಡೆಸುವ ಮುನ್ನ ಈ ಕೆಳಕಂಡ ವಾಕ್ಯಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ನಿಮ್ಮ ಸ್ಥಿತಿಗತಿಗಳು, ಹಣಕಾಸಿನ ಸ್ಥಿತಿಗಳು ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ವಹಿವಾಟನ್ನು ನಡೆಸಬೇಕು. ದರಗಳು ನಿಮ್ಮ ವಿರುದ್ಧ ಹೋದರೆ, ಬಹಳ ಕಡಿಮೆ ಸಮಯದಲ್ಲಿ ನೀವು ಅಧಿಕಾಂಶ ಭಾಗವನ್ನು ಅಥವಾ ಪೂರ್ಣವಾಗಿ ಕಳೆದುಕೊಳ್ಳಬಹುದು. ಹೆಚ್ಚಾಗಿ, ನಿಮ್ಮ ನಷ್ಟವು ಮೂಲ ಅಧಿಕಾಂಶವನ್ನು ಮೀರಬಹುದು.

ಅ. ಫ್ಯೂಚರ್ಸ್ ವಹಿವಾಟಿನಲ್ಲಿ ಎಲ್ಲಾ ಸ್ಥಿತಿಗಳಲ್ಲೂ ದೈನಂದಿನ ಚುಕ್ತಾ ಇರುತ್ತದೆ. ಇಂಡೆಕ್ಸ್/ಡೆರಿವೇಟೀವ್ ಕರಾರಿನ ಕಡೆಯ ಸ್ಥಿತಿಯನ್ನು ಆಧರಿಸಿ, ಪ್ರತಿ ದಿನ ಎಲ್ಲಾ ತೆರೆದ ಸ್ಥಿತಿ ಗಳನ್ನು ಮಾರುಕಟ್ಟೆಗೆ ಗುರುತಿಸಲಾಗುತ್ತದೆ. ಕರಾರು ನಿಮ್ಮ ವಿರುದ್ಧ ಚಲಿಸಿದಲ್ಲಿ, ಅಂತಹ ಚಲನೆಯಿಂದ ಉಂಟಾಗುವ ನಷ್ಟದ (ಕಾಲ್ಪನಿಕ) ಮೊತ್ತವನ್ನು ನೀವು ಠೇವಣಿಯಿಡುವ ಅಗತ್ಯವಿರುತ್ತದೆ. ಸಾಮಾನ್ಯವಾಗಿ ಇದು ಮರುದಿನ ವಹಿವಾಟು ಆರಂಭವಾಗುವ ಮುನ್ನ, ಈ ಮೊತ್ತವನ್ನು ನಿಗದಿತ ಕಾಲಾವಧಿಯಲ್ಲಿ ಪಾವತಿಸಬೇಕಾಗುತ್ತದೆ .

ಆ. ಕಾಲಾವಧಿಯೊಳಗೆ ಹೆಚ್ಚುವರಿ ಮೊತ್ತವನ್ನು ಠೇವಣಿ ಇಡಲು ನೀವು ವಿಫಲರಾದಲ್ಲಿ ಅಥವಾ ನಿಮ್ಮ ಖಾತೆಯಲ್ಲಿ ಬಾಕಿಯುಳಿದ ಸಾಲ ಉಂಟಾದಲ್ಲಿ, ದಳ್ಳಾಳಿಯು ಇಡೀ ಸ್ಥಿತಿಯ ಅಥವಾ ಅದರ ಭಾಗವನ್ನು ಅಥವಾ ಪರ್ಯಾಯ ಸೆಕ್ಯೂರಿಟಿಯನ್ನು ದ್ರವೀಕರಿಸಬಹುದು. ಇಂತಹ ಮಾರಾಟದಿಂದ ಉಂಟಾಗಬಹುದಾದ ಯಾವುದೇ ನಷ್ಟಕ್ಕೆ ನೀವೇ ಬಾಧ್ಯರಾಗಿರುತ್ತೀರಿ.

ಇ. ಕೆಲವು ಮಾರುಕಟ್ಟೆಯ ಸ್ಥಿತಿಗಳಲ್ಲಿ, ವಹಿವಾಟುಗಳನ್ನು ಕಾರ್ಯಗತಗೊಳಿಸಲು ಹೂಡಿಕೆದಾರರಿಗೆ ಕಷ್ಟವಾಗಬಹುದು ಅಥವಾ ಅಸಾಧ್ಯವಾಗಬಹುದು. ಉದಾಹರಣೆಗೆ, ಅದ್ರವತೆಯಿಂದಾಗಿ, ಅಂದರೆ, ದರದ ಮಿತಿಯಿಂದಾಗಿ ಅಥವಾ ಸರ್ಕಿಟ್ ಬ್ರೇಕರ್ ಇತ್ಯಾದಿಯಿಂದಾಗಿ ವಹಿವಾಟನ್ನು ನಿಲ್ಲಿಸಿದರೆ ಅಥವಾ ಪರ್ಯಾಪ್ತವಾದ ಬಿಡ್ ಅಥವಾ ನೀಡಿಕೆಗಳಿಲ್ಲದಿದ್ದರೆ, ಈ ಪರಿಸ್ಥಿತಿಯು ಉಂಟಾಗಬಹುದು .

ಈ. ಮಾರುಕಟ್ಟೆಯ ಸ್ಥಿರತೆಯನ್ನು ಕಾಪಾಡಲು, ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬಹುದು. ಅಧಿಕಾಂಶದ ದರದಲ್ಲಿ ಬದಲಾವಣೆ, ನಗದು ಅಧಿಕಾಂಶದ ದರದಲ್ಲಿ ಏರಿಕೆ ಅಥವಾ ಇತರೆ. ಈ ಹೊಸ ಕ್ರಮಗಳು ಈಗಿರುವ ತೆರೆದ ಬಾಧ್ಯತೆಗಳಿಗೂ ಅನ್ವಯವಾಗಬಹುದು . ಇಂಥ ಪರಿಸ್ಥಿತಿಗಳಲ್ಲಿ, ನೀವು ಹೆಚ್ಚುವರಿ ಅಧಿಕಾಂಶವನ್ನು ನೀಡಬೇಕಾಗಬಹುದು ಅಥವಾ ನಿಮ್ಮ ಸ್ಥಿತಿಗಳನ್ನು ಕಡಿಮೆಗೊಳಿಸಬೇಕಾಗಬಹುದು .

ಉ. ನೀವು ವಹಿವಾಟು ನಡೆಸಲು ಯೋಜಿಸಿರುವ ಎಲ್ಲಾ ಡಿರೈವೇಟಿವ್ ಕರಾರುಗಳ ಪೂರ್ಣ ವಿವರಗಳನ್ನು ನೀಡುವಂತೆ ನಿಮ್ಮ ದಳ್ಳಾಳಿಯನ್ನು ಕೇಳಬೇಕು ಅಂದರೆ, ಕರಾರಿನ ನಿರ್ದಿಷ್ಟತೆಗಳು ಮತ್ತು ಸಂಬಂಧಿತ ಬಾಧ್ಯತೆಗಳು.

**2.2 ಹಣದ ನಿರ್ದಿಷ್ಟ ಅಪಾಯಗಳು:**

1. ವಿದೇಶಿ ಹಣ ನಾಮಾಂಕಿತ ಕರಾರುಗಳಲ್ಲಾಗುವ ಲಾಭ ಅಥವಾ ನಷ್ಟಗಳು, ನಿಮ್ಮದೇ ಅಥವಾ ಇತರ ಅಧಿಕಾರ ವ್ಯಾಪ್ತಿಯಲ್ಲಿ ನಡೆದಂತಹ ವಹಿವಾಟಾಗಿದ್ದರೂ, ಕರಾರಿನ ಕರೆನ್ಸಿಯಿಂದ ಮತ್ತೊಂದು ಕರೆನ್ಸಿಗೆ ಪರಿವರ್ತನೆ ಮಾಡುವಾಗ, ಕರೆನ್ಸಿ ದರಗಳಲ್ಲಿನ ವ್ಯತ್ಯಾಸಗಳಿಂದ ಪರಿಣಾಮಕ್ಕೊಳಗಾಗುತ್ತವೆ.

2. ಕೆಲವು ಮಾರುಕಟ್ಟೆಯ ಪರಿಸ್ಥಿತಿಗಳಲ್ಲಿ, ನಿಮ್ಮ ಸ್ಥಿತಿಯನ್ನು ದ್ರವೀಕರಿಸಲು ನಿಮಗೆ ಕಷ್ಟವಾಗಬಹುದು ಅಥವಾ ಅಸಾಧ್ಯವಾಗಬಹುದು. ಯಾವುದೇ ಕರೆನ್ಸಿಯನ್ನು ಅನಿಯಂತ್ರಣಗೊಳಿಸಿದಾಗ ಅಥವಾ ನಿಶ್ಚಿತ ಬಾಂಡ್ ಪಟ್ಟಿಗಳನ್ನು ವಿಸ್ತರಿಸಿದಾಗ ಹೀಗೆ ಆಗಬಹುದು.

3. ಪೂರೈಕೆ-ಬೇಡಿಕೆಯ ಸಂಬಂಧಗಳು, ಸರಕಾರಗಳ ವಹಿವಾಟು, ವಿತ್ತೀಯ, ಹಣಕಾಸಿನ, ಎಕ್ಸ್ ಚೇಂಜ್ ನಿಯಂತ್ರಣಗಳು ಮತ್ತು ನಿಯಮಗಳು, ವಿದೇಶೀಯ ರಾಜಕೀಯ, ಅರ್ಥ ವ್ಯವಸ್ಥೆಯ ಘಟನೆಗಳು ಮತ್ತು ನೀತಿಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಬಡ್ಡಿ ದರ ಮತ್ತು ಹಣದುಬ್ಬರದಲ್ಲಿನ ಬದಲಾವಣೆಗಳು, ಕರೆನ್ಸಿಯ ಅಪಮೌಲ್ಯ ಮತ್ತು ಮಾರುಕಟ್ಟೆಯಲ್ಲಿನ ಭಾವನೆಗಳು. ಯಾವುದೇ ಒಬ್ಬ

ಸಲಹಾಗಾರರು ಈ ಅಂಶಗಳನ್ನು ನಿಯಂತ್ರಿಸಲಾರರು ಮತ್ತು ಯಾವುದೇ ಭಾಗವಹಿಸುವ ಗ್ರಾಹಕರಿಗೆ ಒಬ್ಬ ಸಲಹಾಗಾರರ ಸಲಹೆಯು ಲಾಭದಾಯಕ ವಹಿವಾಟನ್ನುಂಟುಮಾಡಬಲ್ಲದು ಅಥವಾ ಈ ಘಟನೆಗಳಿಂದ ಒಬ್ಬ ಗ್ರಾಕಹರು ಯಾವುದೇ ನಷ್ಟವನ್ನುಅನುಭವಿಸುವುದಿಲ್ಲ ಎಂಬ ಯಾವುದೇ ಖಾತರಿಯನ್ನು ನೀಡಲಾಗುವುದಿಲ್ಲ.

**2.3 ಆಪ್ಶನ್ ಹಿಡುವಳಿದಾರರ ಅಪಾಯಗಳು:**

1. ಒಬ್ಬ ಆಪ್ಶನ್ ಹಿಡುವಳಿದಾರರು ಬಹಳ ಕಡಿಮೆ ಸಮಯದಲ್ಲಿ ತಾವು ಆಪ್ಶನ್‌ಗೆ ಪಾವತಿಸಿದ ಎಲ್ಲಾ ಮೊತ್ತವನ್ನೂ ಕಳೆದುಕೊಳ್ಳುವ ಅಪಾಯವನ್ನು ಹೊಂದಿರುತ್ತಾರೆ. ಈ ಅಪಾಯವು, ಆಪ್ಶನ್ ಕೊನೆಗೊಂಡಾಗ ವ್ಯರ್ಥವಾಗುವಂತಹ, ಆಪ್ಶನ್ ಒಂದು ವ್ಯರ್ಥ ಆಸ್ತಿಯೆಂಬ ಅದರ ಸ್ವಭಾವವನ್ನು ತೋರಿಸುತ್ತದೆ. ದ್ವಿತೀಯ ಮಾರುಕಟ್ಟೆಯಲ್ಲಿ ಆಪ್ಶನ್ ಅನ್ನು ಮಾರದ ಅಥವಾ ಅದು ಕೊನೆಗೊಂಡಾಗ ಅದನ್ನು ಚಲಾಯಿಸದ ಹಿಡುವಳಿದಾರರು ಅನಿವಾರ್ಯವಾಗಿ ಆಪ್ಶನ್‌ನಲ್ಲಿನ ತಮ್ಮ ಎಲ್ಲಾ ಹೂಡಿಕೆಯನ್ನು ಕಳೆದುಕೊಳ್ಳುತ್ತಾರೆ. ಆಪ್ಶನ್ ಕೊನೆಗೊಳ್ಳುವ ಮುನ್ನ ಅದರ ಮೂಲದ ಕರಾರಿನ ದರವು ನಿರೀಕ್ಷಿತ ಮಾರ್ಗದಲ್ಲಿ, ಆಪ್ಶನ್‌ನ ಬೆಲೆಯನ್ನು ಭರ್ತಿ ಮಾಡುವಷ್ಟು ಪ್ರಮಾಣದಲ್ಲಿ ಬದಲಾಗದಿದ್ದರೆ, ಹೂಡಿಕೆದಾರರು ಆಪ್ಶನ್‌ನಲ್ಲಿನ ತಮ್ಮ ಹೂಡಿಕೆಯ ಎಲ್ಲಾ ಅಥವಾ ಬಹಳಷ್ಟು ಭಾಗವನ್ನು ಕಳೆದುಕೊಳ್ಳಬಹುದು.

2. ಎಕ್ಸ್ ಚೇಂಜ್ ಗಳು ಚಲಾವಣೆಯಲ್ಲಿ ನಿರ್ಭಂಧಗಳನ್ನು ಹೇರಬಹುದು ಮತ್ತು ಕೆಲವು ಸಮಯಗಳಲ್ಲಿ ನಿರ್ದಿಷ್ಟ ಸಂದರ್ಭಗಳಲ್ಲಿ ಆಪ್ಶನ್‌ಗಳ ಚಲಾವಣೆಯನ್ನು ನಿರ್ಭಂಧಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ.

**2.4 ಆಪ್ಶನ್ ರೈಟರ್‌ಗಳ ಅಪಾಯಗಳು:**

1.ಮೂಲ ಕರಾರಿನ ಬೆಲೆಯ ಚಲನೆಯು ನಿರೀಕ್ಷಿತ ದಿಕ್ಕಿನಲ್ಲಿಲ್ಲದಾಗ, ಆಪ್ಶನ್ ರೈಟರ್ ಗಣನೀಯ ಮೊತ್ತವನ್ನು ಕಳೆದುಕೊಳ್ಳುವ ಅಪಾಯವನ್ನು ಹೊಂದಿರುತ್ತಾರೆ.

2. ಅದೇ ಮೂಲದ ಹಿತಾಸಕ್ತಿಯಲ್ಲಿ ಇತರ ಆಪ್ಶನ್ ಗಳನ್ನು ಕೊಂಡು, ಈ ಮೂಲಕ ವಿಸ್ತ್ರತ ಸ್ಥಿತಿಯನ್ನು ಉಂಟುಮಾಡಿ ಅಥವಾ ಆಪ್ಶನ್ ಮಾರುಕಟ್ಟೆಯಲ್ಲಿ ಅಥವಾ ಇತರ ಮಾರುಕಟ್ಟೆಗಳಲ್ಲಿ ಇತರ ರೀತಿಯ ಭದ್ರತಾ ಸ್ಥಿತಿಗಳನ್ನು ಕೊಳ್ಳುವುದುರಿಂದ ಆಪ್ಶನ್ ರೈಟರ್‌ನ ಅಪಾಯವನ್ನು ಕಡಿಮೆಗೊಳಿಸಬಹುದು. ಆದರೆ, ರೈಟರ್ ಹರಡಿದ ಅಥವಾ ಭದ್ರತಾ ಸ್ಥಿತಿಯನ್ನು ಹೊಂದಿದ್ದರೂ, ಅಪಾಯಗಳು ಗಣನೀಯವಾಗಿರಬಹುದು. ವಿಸ್ತ್ರತ ಸ್ಥಿತಿಯು ಸರಳವಾದ ಲಾಂಗ್ ಅಥವಾ ಶಾರ್ಟ್ ಸ್ಥಿತಿಗಿಂತ ಅನಿವಾರ್ಯವಾಗಿ ಕಡಿಮೆ ಅಪಾಯವನ್ನು ಹೊಂದಿರುವುದಿಲ್ಲ.

3. ಸಂಯುಕ್ತವಾಗಿ ಬಹು-ಆಪ್ಶನ್ ಗಳನ್ನು ಕೊಳ್ಳುವುದುರಿಂದ ಮತ್ತು ಬರೆಯುವ ಅಥವಾ ಸಂಯುಕ್ತವಾಗಿ ಅಪ್ಶನ್‌ಗಳನ್ನು ಕೊಳ್ಳುವುದು ಅಥವಾ ಬರೆಯುವುದು ಮತ್ತು ಮೂಲದ ಹಿತಾಸಕ್ತಿಯ ಕೊಳ್ಳುವಿಕೆ ಅಥವಾ ಶಾರ್ಟ್ ಮಾರಾಟಗಳ ವಹಿವಾಟುಗಳಿಂದ ಹೂಡಿಕೆದಾರರಿಗೆ ಹೆಚ್ಚುವರಿ ಅಪಾಯಗಳನ್ನಿಡುತ್ತದೆ. ಆಪ್ಶನ್ ವಿಸ್ತರಣೆಗಳಂತಹ ಸಂಯುಕ್ತ ವಹಿವಾಟುಗಳು, ಒಂದು ಆಪ್ಶನ್ ಅನ್ನು ಕೊಳ್ಳುವ ಅಥವಾ ಬರೆಯುವುದಕ್ಕಿಂತ ಹೆಚ್ಚು ಕ್ಲಿಷ್ಟವಾಗಿರುತ್ತವೆ. ಮತ್ತು ನೀವು ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಹೂಡಿಕೆಯ ಯಾವುದೇ ಕ್ಷೇತ್ರದಲ್ಲಿದ್ದಂತೆ, ಸರಿಯಾಗಿ ಅರ್ಥವಾಗದ ಜಟಿಲತೆಯು, ತಾನೇ ಒಂದು ಅಪಾಯವಾಗಿರುತ್ತದೆ. ಸಂಯುಕ್ತ ಕಾರ್ಯತಂತ್ರಗಳನ್ನು ಪರಿಗಣಿಸಬಾರದು ಎಂದು ಇದು ಸೂಚಿಸುತ್ತಿಲ್ಲವಾದರೂ, ಆಪ್ಶನ್‌ಗಳಲ್ಲಿ ಹೂಡಿಕೆಯಂತೆ, ವಿವಿಧ ಮಾರುಕಟ್ಟೆಯ ಸಂದರ್ಭಗಳಲ್ಲಿ ಸಂಯುಕ್ತ ವಹಿವಾಟುಗಳ ಅಪಾಯಗಳು ಮತ್ತು ಸಂಭಾವ್ಯ ಲಾಭಗಳ ಬಗ್ಗೆ ಅನುಭವ ಮತ್ತು ಜ್ಞಾನ ಇರುವಂಥ ವ್ಯಕ್ತಿಯ ಸಲಹೆ ಕೋರುವುದು ಒಳ್ಳೆಯದು ಎಂದು ಸಲಹೆ ನೀಡುತ್ತೇವೆ.

**3. ತಂತಿ ರಹಿತ ತಂತ್ರಜ್ಞಾನ/ಕುಶಲ ಆದೇಶ ಮಾರ್ಗ ಯೋಜನೆ ಅಥವಾ ಇನ್ನಿತರ ತಂತ್ರಜ್ಞಾನದ ಮೂಲಕ ವಹಿವಾಟು:**

ತಂತಿ ರಹಿತ ತಂತ್ರಜ್ಞಾನ/ಕುಶಲ ಆದೇಶ ಮಾರ್ಗಯೋಜನೆ ಅಥವಾ ಇನ್ನಿತರ ತಂತ್ರಜ್ಞಾನದ ಮೂಲಕ ಸೆಕ್ಯುರಿಟೀಸ್ ವಹಿವಾಟುಗಳಿಗೆ ಸಂಬಂಧಿಸಿರುವ, ವೈಶಿಷ್ಟ್ಯಗಳು, ಅಪಾಯಗಳು, ಜವಾಬ್ದಾರಿಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಯ ಹೆಚ್ಚುವರಿ ನಿಯಮಗಳ ಬಗ್ಗೆ ಸ್ಟಾಕ್ ದಳ್ಳಾಳಿಯು ತಮ್ಮ ಗ್ರಾಹಕರಿಗೆ ತಿಳಿಸಬೇಕು.

**4. ಸಾಮಾನ್ಯ**

4.1 'ಕಾನ್ಸ್ಟಿಟ್ಯುಯೆಂಟ್' ಎಂಬ ಪದವು, ಎಕ್ಸ್ ಚೇಂಜ್‌ಗಳು ನೀಡಿರುವ, ಸೆಕ್ಯೂರಿಟಿ/ಡೆರಿವೇಟೀವ್ ಕರಾರುಗಳನ್ನು ಕೊಳ್ಳುವ ಮತ್ತು/ಅಥವಾ ಮಾರುವ ಮಾರ್ಗಗಳ ಮೂಲಕ, ಈ ಧ್ಯೇಯದಿಂದ ಸ್ಟಾಕ್ ದಳ್ಳಾಳಿಯೊಡನೆ ವಹಿವಾಟನ್ನು ಮಾಡುವಂತಹ ಗಿರಾಕಿ, ಗ್ರಾಹಕ ಅಥವಾ ಒಬ್ಬ ಹೂಡಿಕೆದಾರರನ್ನು ಒಳಗೊಂಡಿರುತ್ತದೆ ಮತ್ತು ಅರ್ಥೈಸುತ್ತದೆ.

4.2 'ಸ್ಟಾಕ್ ದಳ್ಳಾಳಿ' ಎಂಬ ಪದವು, ಎಕ್ಸ್ ಚೇಂಜ್ ಗಳು SEBI ಅನುಮತಿ ನೀಡಿರುವಂಥ ಮತ್ತು SEBIಯಿಂದ ನೋಂದಣಿ ಪ್ರಮಾಣಪತ್ರ ಪಡೆದಿರತಕ್ಕಂತಹ ಒಬ್ಬ ಸ್ಟಾಕ್ ದಳ್ಳಾಳಿ. ದಳ್ಳಾಳಿ ಅಥವಾ ಸ್ಟಾಕ್ ದಳ್ಳಾಳಿಯನ್ನು ಒಳಗೊಂಡಿರುತ್ತದೆ ಮತ್ತು ಅರ್ಥೈಸುತ್ತದೆ.

# ಅನುಬಂಧ - 6

## ಗೈಡೆನ್ಸ್ ನೋಟ್: ಹೂಡಿಕೆದಾರರು ಎಕ್ಸ್ ಚೇಂಜ್‌ನಲ್ಲಿ (ಗಳಲ್ಲಿ) ಟ್ರೇಡ್ ಮಾಡುವಾಗ ಬೇಕು-ಬೇಡಗಳು

### ನೀವು ಟ್ರೇಡ್ ಮಾಡುವ ಮುನ್ನ

1. ನೀವು SEBI ನೋಂದಾಯಿತ ಮಧ್ಯವರ್ತಿಗಳ ಮೂಲಕ ಮಾತ್ರವೇ ವ್ಯವಹರಿಸುತ್ತಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ. ಅವರ SEBI ನೋಂದಾವಣಿ ಪ್ರಮಾಣಪತ್ರದ ನಂಬರನ್ನು ಸ್ಟಾಕ್ ಎಕ್ಸ್ ಚೇಂಜ್/ www.exchange.com ಮತ್ತು www.sebi.gov.in ವೆಬ್-ಸೈಟುಗಳಲ್ಲಿ ಲಭ್ಯವಿರುವ ಪಟ್ಟಿಯ ಜೊತೆ ಪರಿಶೀಲಿಸಿ.
2. KYC ಫಾರಂ ಸಂಪೂರ್ಣವಾಗಿ ಭರ್ತಿ ಮಾಡಿ ಮತ್ತು ಖಾಲಿ ಸ್ಥಳಗಳನ್ನು ಹೊಡೆದು ಹಾಕಿ.
3. ಹಕ್ಕುಗಳು ಮತ್ತು ಬಾಧ್ಯತೆಗಳು,ಅಪಾಯ ಬಹಿರಂಗಪಡಿಸುವ ಪತ್ರ, ಸ್ಟಾಕ್ ಬ್ರೋಕರನ ಪಾಲಿಸಿ ಮತ್ತು ಕಾರ್ಯನೀತಿ ಪತ್ರ, ಹೀಗೆ ಎಲ್ಲ ಕಡ್ಡಾಯ ಪತ್ರಗಳನ್ನೂ ಖಚಿತವಾಗಿ ಓದಿ.
4. ನಿಮ್ಮ ಮತ್ತು ಸ್ಟಾಕ್ ಬ್ರೋಕರ್ ನಡುವೆ ಸ್ವಯಂಪ್ರೇರಿತ ಕಲಮುಗಳ ಏನಾದರೂ ಒಪ್ಪಂದವಾಗಿದ್ದರೆ ಅವುಗಳನ್ನು ತಪ್ಪದೇ ಓದಿ, ಅರ್ಥ ಮಾಡಿಕೊಳ್ಳಿ ನಂತರ ಸಹಿಹಾಕಿ. ನಿಮ್ಮಿಬ್ಬರ ನಡುವೆ ಆದ ಒಪ್ಪಂದದ ಕಲಮುಗಳನ್ನು ನಿಮ್ಮ ಒಪ್ಪಿಗೆ ಇಲ್ಲದೇ ಬದಲಿಸುವಂತಿಲ್ಲ ಎಂಬುದನ್ನು ನೆನಪಿಡಿ.
5. ನೀವು ಟ್ರೇಡಿಂಗ್ ಮಾಡಿದ್ದಕ್ಕೆ ಸ್ಟಾಕ್ ಬ್ರೋಕರ್ ವಿಧಿಸುವ ಎಲ್ಲ ಬ್ರೋಕರೇಜ್, ಕಮಿಷನುಗಳು, ಶುಲ್ಕಗಳು ಮತ್ತು ಇತರ ವೆಚ್ಚಗಳ ಮತ್ತು ಅವುಗಳ ಬಗ್ಗೆ SEBI/ಸ್ಟಾಕ್ ಎಕ್ಸ್ ಚೇಂಜುಗಳು ನೀಡಿರುವ ಉಪಬಂಧಗಳು/ ಮಾರ್ಗದರ್ಶಕಗಳ ಬಗ್ಗೆ ಒಂದು ಸ್ಪಷ್ಟವಾದ ಕಲ್ಪನೆ ಹೊಂದಿರಿ.
6. ನೀವು ಸಹಿ ಹಾಕಿರುವ ಎಲ್ಲ ಕಾಗದಪತ್ರಗಳ ನಕಲನ್ನು ಸ್ಟಾಕ್ ಬ್ರೋಕರನಿಂದ ಉಚಿತವಾಗಿ ಪಡೆಯಿರಿ.
7. ಒಂದ ವೇಳೆ ನೀವು ಸ್ಟಾಕ್ ಬ್ರೋಕರ್‌ಗೆ ನಿಮ್ಮ ಬ್ಯಾಂಕ್ ಖಾತೆ ಮತ್ತು ಡಿಮ್ಯಾಟ್ ಖಾತೆಯನ್ನು ಆಪರೇಟ್ ಮಾಡಲು ಪವರ್ ಆಫ್ ಅಟಾರ್ನಿ (POA) ಜಾರಿ ಮಾಡಲು ಬಯಸಿದರೆ ದಯವಿಟ್ಟು SEBI/ ಎಕ್ಸ್ ಚೇಂಜುಗಳು ಈ ಬಗ್ಗೆ ನೀಡುವ ಮಾರ್ಗದರ್ಶಕಗಳನ್ನು ಪರಾಮರ್ಶಿಸಿ.

### ವ್ಯವಹಾರಗಳು ಮತ್ತುಇತ್ಯರ್ಥಗಳು

8. ನೀವು ಲಿಖಿತ ರೂಪದಲ್ಲಿ ನಿರ್ದಿಷ್ಟವಾಗಿ ಅಧಿಕಾರ ನೀಡಿದರೆ ಸ್ಟಾಕ್ ಬ್ರೋಕರ್ ಇಲೆಕ್ಟ್ರಾನಿಕ್ ಕಾಂಟ್ರ್ಯಾಕ್ಟ್ ನೋಟ್‌ಗಳನ್ನು (ECN) ನೀಡಬಹುದು. ಅದಕ್ಕಾಗಿ ನೀವು ಸ್ಟಾಕ್ ಬ್ರೋಕರಿಗೆ ನಿಮ್ಮ ಇಮೇಲ್ ಐಡಿ ನೀಡಬೇಕು. ಕಂಪ್ಯೂಟರುಗಳ ಜೊತೆ ಕೆಲಸ ಮಾಡಿ ಅನುಭವ ಇಲ್ಲದಿದ್ದರೆ ಇಸಿಎನ್ ಆಯ್ಕೆಬೇಡ.
9. ನಿಮ್ಮ ಇಂಟರ್‌ನೆಟ್ ಟ್ರೇಡಿಂಗ್ ಖಾತೆಯ ಪಾಸ್‌ವರ್ಡನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.
10. ಸ್ಟಾಕ್ ಬ್ರೋಕರಿಗೆ ನಗದಲ್ಲಿ ಏನನ್ನೂ ಪಾವತಿಸಬೇಡಿ.
11. ಸ್ಟಾಕ್ ಬ್ರೋಕರ್ ಹೆಸರಿಗೆ ಅಕೌಂಟ್ ಪೇಯೀ ಚೆಕ್ ಮೂಲಕ ಪಾವತಿಸಿ. ಸಬ್-ಬ್ರೋಕರ್ ಹೆಸರಿಗೆ ಚೆಕ್ ಬರೆಯಬೇಡಿ. ಸ್ಟಾಕ್ ಬ್ರೋಕರಿಗೆ ಮಾಡಿದ ಪಾವತಿ/ಸೆಕ್ಯುರಿಟಿ ಜಮಾಗಳಿಗೆ ದಾಖಲೆಗಳನ್ನು ರುಜುವಾತಾಗಿ ಇರಿಸಿಕೊಳ್ಳುವುದನ್ನು ಮರೆಯಬೇಡಿ. ಅದರಲ್ಲಿ ಈ ವಿವರಗಳಿರಲಿ. ಆರಂಭದ ದಿನ, ಸ್ಕ್ರಿಪ್, ಪ್ರಮಾಣ, ಆ ಹಣ/ಸೆಕ್ಯುರಿಟಿಯನ್ನು ಯಾವ ಬ್ಯಾಂಕ್/ಡಿಮ್ಯಾಟ್ ಖಾತೆಗೆ ಮತ್ತು ಯಾವ ಬ್ಯಾಂಕಿನ/ಡಿಮ್ಯಾಟ್ ಖಾತೆಯಿಂದ ಜಮಾ ಮಾಡಲಾಗಿದೆ.

12. ಟ್ರೇಡ್ ಪರಿಶೀಲನೆ ಸೌಲಭ್ಯ ಸ್ಟಾಕ್ ಎಕ್ಸ್ ಚೇಂಜುಗಳ ಜಾಲತಾಣಗಳಲ್ಲಿ ಲಭ್ಯವಿರುತ್ತದೆ. ಇದರಲ್ಲಿ ಕಾಂಟ್ರ್ಯಾಕ್ಟ್ ನೋಟಿನಲ್ಲಿ ಹೇಳಿರುವ ಟ್ರೇಡ್ ವಿವರಗಳನ್ನು ಪರಿಶೀಲಿಸಬಹುದು. ಅವು ಪರಸ್ಪರ ತಾಳೆಯಾಗದಿದ್ದರೆ ತಕ್ಷಣವೇ ಸಂಬಂಧ ಪಟ್ಟಸ್ಟಾಕ್ ಎಕ್ಸ್ ಚೇಂಜಿನ ಹೂಡಿಕೆದಾರರ ದೂರುಗಳ ವಿಭಾಗವನ್ನು ಸಂಪರ್ಕಿಸಿ.
13. ಒಂದು ವೇಳೆ ನೀವು ನಿಮ್ಮ ಖಾತೆಯನ್ನು ನಿರ್ವಹಿಸಲು ನಿರ್ದಿಷ್ಟ ಅಧಿಕಾರವನ್ನು ನೀಡಿದರೆ, ನಿಧಿಗಳ ಪೇಔಟ್ ಅಥವಾ ಸೆಕ್ಯುರಿಟೀಸ್ ಡೆಲಿವರಿ(ಸಂದರ್ಭಾನುಸಾರ)ಯನ್ನು ಎಕ್ಸ್ ಚೇಂಜಿನಿಂದ ಪೇಔಟ್ ಸ್ವೀಕರಿಸಿದ ಒಂದು ಕೆಲಸದ ದಿನದ ಒಳಗಾಗಿ ನಿಮಗೆ ಮಾಡಲಾಗದಿರಬಹುದು. ನಿಮ್ಮ ಖಾತೆಯನ್ನು ನಿರ್ವಹಿಸುವ ಸ್ಟಾಕ್ ಬ್ರೋಕರ್ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತಾನೆ:
    a) ಅಂತಹ ಅಧಿಕಾರ ನೀಡುವಿಕೆಗೆ  ದಿನಾಂಕ ಹಾಕಿ ನೀವು ಸಹಿ ಮಾಡಿರಬೇಕು ಮತ್ತು ಅಧಿಕಾರವನ್ನು ನೀವು ಯಾವುದೇ ಸಮಯದಲ್ಲಿ ರದ್ದು ಮಾಡಬಹುದೆಂಬ ಕಲಮನ್ನು ಹೊಂದಿರಬೇಕು.
    b) ಸ್ಟಾಕ್ ಬ್ರೋಕರ್, ನಿಧಿಗಳು ಮತ್ತು ಸೆಕ್ಯುರಿಟಿಗಳ ವಾಸ್ತವ ಇತ್ಯರ್ಥವನ್ನು ಕ್ಯಾಲೆಂಡರ್ ತ್ರೈಮಾಸಿಕ ಅಥವಾ ತಿಂಗಳಲ್ಲಿ ಕನಿಷ್ಠ ಒಮ್ಮೆಯಾದರೂ ಮಾಡಬೇಕು, ಇದು ನಿಮ್ಮ ಆಯ್ಕೆಯನ್ನು ಅವಲಂಬಿಸಿರುತ್ತದೆ. ಹಾಗೆ ಇತ್ಯರ್ಥ ಮಾಡುವಾಗ ಸ್ಟಾಕ್ ಬ್ರೋಕರ್ ನಿಮಗೆ ಗ್ರಾಹಕನ ಖಾತೆ ಪುಸ್ತಕದಿಂದ 'ಸ್ಟೇಟ್ಮೆಂಟ್ ಆಫ್ ಅಕೌಂಟ್ಸ್' ಹಾಳೆಯ ಪ್ರತಿಯನ್ನು ಮತ್ತು ರಿಜಿಸ್ಟರ್ ಆಫ್ ಸೆಕ್ಯುರಿಟೀಸ್ ಪ್ರತಿಯನ್ನು ಕಳುಹಿಸುತ್ತಾನೆ;  ಇದರಲ್ಲಿ ನಿಧಿಗಳ ಮತ್ತು ಸೆಕ್ಯುರಿಟಿಗಳ  ರಸೀತಿಗಳು/ಡೆಲಿವರಿಗಳ  ಎಲ್ಲ ಸ್ವೀಕಾರಗಳು/ ಡೆಲಿವರಿಗಳನ್ನು ತೋರಿಸಲಾಗಿರುತ್ತದೆ. ಈ ಹೇಳಿಕೆಯು ನಿಧಿಗಳು ಮತ್ತು ಸೆಕ್ಯುರಿಟಿಗಳನ್ನು ಏನಾದರೂ ಉಳಿಸಿಕೊಂಡಿರುವುದರ ವಿವರಗಳನ್ನೂ ಹೊಂದಿರುತ್ತವೆ.
    c) ಇತ್ಯರ್ಥದ ದಿನ, ಸ್ಟಾಕ್ ಬ್ರೋಕರ್ ಬಾಕಿ ಉಳಿದಿರುವ ಬಾಧ್ಯತೆಗಳಿಗೆಂದು ಅಗತ್ಯವಾದ ಸೆಕ್ಯುರಿಟಿಗಳು/ನಿಧಿಗಳನ್ನು ಉಳಿಸಿಕೊಂಡಿರಬಹುದು ಮತ್ತು ಮುಂದಿನ 5 ಟ್ರೇಡಿಂಗ್ ದಿನಗಳಲ್ಲಿ ಕೊಡಬೇಕಾಗಬಹುದಾದ ಡೆರಿವೇಟೀವ್ಸ್ ಮಾರ್ಜಿನ್ ಹೊಣೆಗಳಿಗೆ ಅಗತ್ಯವಾದ ನಿಧಿಗಳನ್ನೂ ಉಳಿಸಿಕೊಳ್ಳಬಹುದು. ಇದನ್ನು ಸ್ಟಾಕ್ ಎಕ್ಸ್ ಚೇಂಜ್ ನಿರ್ದಿಷ್ಟಪಡಿಸುವ ವಿಧಾನದಲ್ಲಿ ಲೆಕ್ಕ ಮಾಡಲಾಗುತ್ತದೆ. ನಗದು ಮಾರುಕಟ್ಟೆ ವ್ಯವಹಾರಗಳಾದರೆ ಸ್ಟಾಕ್ ಬ್ರೋಕರ್ ಗ್ರಾಹಕನಿಂದ ಇತ್ಯರ್ಥದ ದಿನ ಮತ್ತು ಮುಂದಿನ ವ್ಯವಹಾರದ ದಿನ ಬರಬೇಕಾದ ನಿಧಿಗಳ ಮತ್ತು ಸೆಕ್ಯುರಿಟಿಗಳ ಇಡೀ ಪೇ-ಇನ್ ಬಾಧ್ಯತೆಗಳನ್ನು ಉಳಿಸಿಕೊಳ್ಳಬಹುದು. ಹೀಗೆ ಉಳಿಸಿಕೊಳ್ಳುವ ನಿಧಿಗಳು/ ಸೆಕ್ಯುರಿಟಿಗಳು/ ಮಾರ್ಜಿನ್‌ಗಳ ಮೌಲ್ಯ, ನಗದು ಮಾರುಕಟ್ಟೆಯಲ್ಲಿ ಅಂತಹ ಇತ್ಯರ್ಥವಾಗುವ ದಿನ ನಡೆಸಲಾಗುವ ವ್ಯವಹಾರಗಳ ಮೌಲ್ಯದಷ್ಟಿರುತ್ತದೆ.
    d) ಸ್ಟೇಟ್ಮೆಂಟ್ ಆಫ್ ಅಕೌಂಟ್ ಅಥವಾ ಇತ್ಯರ್ಥದ ಬಗ್ಗೆ ಏನಾದರೂ ತಗಾದೆ ಇದರೆ ಅದನ್ನು ಸ್ಟಾಕ್ ಬ್ರೋಕರನ ಗಮನಕ್ಕೆ ತರಬೇಕು. ಇದನ್ನು ನಿಧಿ/ಸೆಕ್ಯುರಿಟಿಗಳು ಅಥವಾ ಹೇಳಿಕೆ (ಸಂದರ್ಭಾನುಸಾರ) ಸ್ವೀಕಾರವಾದ ದಿನಾಂಕದಿಂದ 7 (ಏಳು) ಕೆಲಸದ ದಿನಗಳ ಒಳಗೆ ಲಿಖಿತವಾಗಿ ತಿಳಿಸಬೇಕು. ವ್ಯಾಜ್ಯಗಳಿದ್ದರೆ ತಡಮಾಡದೇ ಸಂಬಂಧಪಟ್ಟ ಸ್ಟಾಕ್ ಎಕ್ಸ್ ಚೇಂಜಿನ ಹೂಡಿಕೆದಾರರ ದೂರು ಕೋಶಕ್ಕೆ ಲಿಖಿತವಾಗಿ ವಿಷಯ ತಿಳಿಸಿ.
14. ಒಂದು ವೇಳೆ ನೀವು ನಿಮ್ಮ ಖಾತೆಯನ್ನು ನಿರ್ವಹಿಸಲು ನಿರ್ದಿಷ್ಟ ಅಧಿಕಾರವನ್ನು ನೀಡಿರದಿದ್ದರೆ, ನಿಧಿಗಳ ಪೇಔಟ್ ಅಥವಾ ಸೆಕ್ಯುರಿಟೀಸ್ ಡೆಲಿವರಿ(ಸಂದರ್ಭಾನುಸಾರ)ಯನ್ನು ಎಕ್ಸ್ ಚೇಂಜಿನಿಂದ ಪೇಔಟ್ ಸ್ವೀಕರಿಸಿದ ಒಂದು ಕೆಲಸದ ದಿನದ ಒಳಗಾಗಿ ನಿಮಗೆ ಮಾಡದಿದ್ದರೆ ದಯವಿಟ್ಟು ವಿಷಯವನ್ನು ಸ್ಟಾಕ್ ಬ್ರೋಕರ್ ಗಮನಕ್ಕೆ ತನ್ನಿ. ಏನಾದರೂ ವ್ಯಾಜ್ಯವಿದ್ದರೆ ತಕ್ಷಣವೇ ಸಂಬಂಧ ಪಟ್ಟಸ್ಟಾಕ್ ಎಕ್ಸ್ ಚೇಂಜಿನ ಹೂಡಿಕೆದಾರರ ದೂರು ವಿಭಾಗಕ್ಕೆ ಲಿಖಿತ ದೂರನ್ನು ಸಲ್ಲಿಸಿ.

15. ನಿಮ್ಮ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿಯನ್ನು ಸ್ಟಾಕ್ ಬ್ರೋಕರ್‌ನೊಂದಿಗೆ ನೋಂದಾಯಿಸಿ. ದಿನದ ಕೊನೆಗೆ ಸ್ಟಾಕ್ ಎಕ್ಸ್ ಚೇಂಜ್ ಟ್ರೇಡ್ ಧೃಢೀಕರಣ ಎಚ್ಚರಿಕೆಗಳು/ ವ್ಯವಹಾರಗಳ ವಿವರಗಳನ್ನು ಎಸ್ಸೆಮೆಸ್ ಅಥವಾ ಇಮೇಲ್ ಮೂಲಕ ಕಳುಹಿಸಲು ಸಾಧ್ಯವಾಗುತ್ತದೆ.

## ಟ್ರೇಡಿಂಗ್ ಸದಸ್ಯತ್ವ ಕೊನೆಗೊಳಿಸುವ ಸಂದರ್ಭದಲ್ಲಿ

16. ಒಂದ ವೇಳೆ ಸ್ಟಾಕ್ ಬ್ರೋಕರ್ ತನ್ನ ಸದಸ್ಯತ್ವ ಬಿಟ್ಟುಬಿಟ್ಟರೆ, ಸದಸ್ಯತ್ವದಿಂದ ಉಚ್ಚಾಟಿಸಲ್ಪಟ್ಟರೆ ಅಥವಾ ತಪ್ಪಿತಸ್ಥನೆಂದು ಘೋಷಣೆಯಾದರೆ, ಸ್ಟಾಕ್ ಎಕ್ಸ್ ಚೇಂಜ್ ಒಂದು ಸಾರ್ವಜನಿಕ ನೋಟಿಸನ್ನು ನೀಡಿ ಹೂಡಿಕೆದಾರರಿಂದ 'ಟ್ರೇಡಿಂಗ್ ವ್ಯವಸ್ಥೆಯಲ್ಲಿ ನಡೆದ ವ್ಯವಹಾರ'ಗಳಿಗೆ ಸಂಬಂಧಿಸಿದ ಕ್ಲೇಮುಗಳನ್ನು ಮಾತ್ರ ಆಹ್ವಾನಿಸುತ್ತದೆ. ನೀವು ಸಂಬಂಧ ಪಟ್ಟ ಎಕ್ಸ್ ಚೇಂಜಿಗೆ ನಿಗದಿತ ಸಮಯದ ಒಳಗೆ ಮತ್ತು ಬೆಂಬಲದ ದಾಖಲೆಗಳ ಜೊತೆಗೆ ಕ್ಲೇಮನ್ನು ಸಲ್ಲಿಸಬೇಕು.
17. ಸ್ಟಾಕ್ ಬ್ರೋಕರ್, ತಪ್ಪಿದರೆ ಅಥವಾ ದಿವಾಳಿಯಾದರೆ ಸ್ಟಾಕ್ ಬ್ರೋಕರನಲ್ಲಿ ಜಮಾ ಮಾಡಿದ ಹಣ ಮತ್ತು/ಅಥವಾ ಸೆಕ್ಯುರಿಟಿಗಳಿಗೆ ಸಿಗುವ ರಕ್ಷಣೆಯ ಬಗ್ಗೆ ಮತ್ತು ಎಷ್ಟು ಹಣ/ಸೆಕ್ಯುರಿಟಿ ನಿಮಗೆ ವಾಪಸಾಗಬಹುದು ಎಂಬದರ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಿ. ಕಾಲ ಕಾಲಕ್ಕೆ ಜಾರಿಯಲ್ಲಿರುವ ಸಂಬಂಧ ಪಟ್ಟ ಸ್ಟಾಕ್ ಎಕ್ಸ್ ಚೇಂಜ್‌ನ ಬೈಲಾಗಳು ಮತ್ತು ನಿಬಂಧನೆಗಳು ಮತ್ತು ಹೂಡಿಕೆದಾರರ ಸಂರಕ್ಷಣಾ ನಿಧಿ ಯೋಜನೆಗಳು ಈ ಬಗ್ಗೆ ಹೇಳುವುದನ್ನು ತಿಳಿದುಕೊಳ್ಳಿ.

## ವ್ಯಾಜ್ಯಗಳು/ದೂರುಗಳು

18. ಗಮನಿಸಿ ಮಧ್ಯಸ್ಥಿಕೆ ಕಾರ್ಯವಿಧಾನಗಳು, ಬ್ರೋಕರುಗಳ ವಿರುದ್ಧ ದಂಡ ಪ್ರಕ್ರಿಯೆ ಮತ್ತು ಸ್ಟಾಕ್ ಬ್ರೋಕರುಗಳ ವಿರುದ್ಧ ಹೂಡಿಕೆದಾರರ ದೂರುಗಳ ವಿವರಗಳನ್ನು ಸಂಬಂಧ ಪಟ್ಟ ಸ್ಟಾಕ್ ಎಕ್ಸ್ ಚೇಂಜಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ.
19. ಸಂಬಂಧ ಪಟ್ಟ ಸ್ಟಾಕ್ ಬ್ರೋಕರ್/ಸಬ್-ಬ್ರೋಕರ್ ನಿಮ್ಮ ವಿಷಯ/ಸಮಸ್ಯೆ/ದೂರನ್ನು ಪರಿಗಣಿಸುತ್ತಿಲ್ಲವಾದರೆ ನೀವು ವಿಷಯವನ್ನು ಸಂಬಂಧಪಟ್ಟ ಸ್ಟಾಕ್ ಎಕ್ಸ್ ಚೇಂಜಿಗೆ ಒಯ್ಯಬಹುದು. ಅಲ್ಲಿಯೂ ನಿಮಗೆ ತೃಪ್ತಿಯಾಗದಿದ್ದರೆ SEBIಗೆ ವಿಷಯವನ್ನು ದಾಟಿಸಬಹುದು.
20. ದೂರುಗಳನ್ನು ನೋಂದಾಯಿಸಲು ದೂರು ಪರಿಹಾರ ವಿಭಾಗ/ಸಮನ್ವಯ ಅಧಿಕಾರಿಯ ಪ್ರತ್ಯೇಕ ಇಮೇಲ್ ಐಡಿಯನ್ನು ನಿಯೋಜಿಸಬೇಕು ಎಂದು SEBI ಎಲ್ಲ ಸ್ಟಾಕ್ ಬ್ರೋಕರುಗಳಿಗೆ/ಸಬ್-ಬ್ರೋಕರುಗಳಿಗೆ ಕಡ್ಡಾಯ ಮಾಡಿರುತ್ತದೆ.